॥ ಶ್ರೀ ಗೋಪಾಲಕೃಷ್ಣಾಯ ನಮಃ ॥

ಯಕ್ಷಗಾನ

ದಶಮಿ

(ಕಂದಾವರ ರಘುರಾಮ ಶೆಟ್ರ ಆಯ್ದ ಹತ್ತು ಪ್ರಸಂಗಗಳು)

ಪ್ರಕಾಶಕರು
ಮಾದಯ್ಯ ಶೆಟ್ರಮನೆ ಧಾರ್ಮಿಕ ಪ್ರತಿಷ್ಠಾನ
ಉಪ್ಪುಂದ, ಉಡುಪಿ ಜಿಲ್ಲೆ.

ಅನುಕ್ರಮಣಿಕೆ

ಸಂಪುಟಕ್ಕೊಂದು ಸೇಸೆ

ಅರ್ಪಣೆ

ಬರೆದವರ ಬಿನ್ನಹ

ಪ್ರಕಾಶಕರ ಮಾತು

1. ಸತಿ ಸೀಮಂತಿನಿ ಅಥವಾ ಸೋಮವಾರ ವ್ರತ ಮಹಾತ್ಮೆ 1
2. ಉತ್ತಮ ಚರಿತೆ ಅಥವಾ ನಾಗನಂದನೆ 25
3. ಸೀತಾಪಾರಮ್ಮ 45
4. ವಧೂ ಮಾಧವಿ 65
5. ವಸುವರಾಂಗಿ 85
6. ಶ್ರೀದೇವಿ ಬನಶಂಕರಿ 105
7. ಚೆಲುವೆ ಚಿತ್ರಾವತಿ 125
8. ಶೂದ್ರ ತಪಸ್ವಿನಿ 149
9. ರತಿರೇಖಾ 169
10. ಶಾಪ ಸಂಯೋಗ ಅಥವಾ ಮಂತ್ರ ಮಾಣಿಕ್ಯ 193

ವಿಶೇಷ ಸೂಚನೆಗಳು 215

ಉತ್ತಮ ಚರಿತೆ

ಅಥವಾ

ನಾಗನಂದನೆ

ಪಾತ್ರ ಪರಿಚಯ

1. ಧ್ರುವ - ಬರ್ಹಿಸ್ಮತಿ ಅರಸ
2. ಬಾಭ್ರುವ್ಯ - ಚಕ್ರಾಂಕಿತದ ಅರಸ
3. ಉತ್ತಮ - ಕುಶದ್ವೀಪದ ರಾಜ
4. ಗುಣಭದ್ರ - ಮದ್ರದೇಶದ ಅರಸ
5. ವೀರವರ್ಮ - ಕಳಿಂಗದ ದೊರೆ
6. ನೀಲಕೇತ - ಅಂಗದೇಶದ ರಾಜ
7. ಉತ್ತಮನ ಮಂತ್ರಿ
8. ಸಾಲಪೋತಕ - ನಾಗರಾಜ
9. ಬಲಾಕ - ಉತ್ಪಲಾವನದ ರಕ್ಕಸ ರಾಜ
10. ಸುಶರ್ಮ - ಪುರೋಹಿತ (ಕುಶದ್ವೀಪ)
11. ಸುಭದ್ರೆ - ಸುಶರ್ಮನ ಹೆಂಡತಿ
12. ಸುದೇವ - ಸುಶರ್ಮನ ಮಗ
13. ತಪಸ್ವಿ
14. ತಪಸ್ವಿಯ ಶಿಷ್ಯ
15. ಅಲಕ - ನಾಗಶಿಲ್ಪಿ
16. ದುರ್ಮುಖಿ - ಬಲಾಕನ ಮಂತ್ರಿ
17. ರೈತ - ಕುಶದ್ವೀಪವಾಶಿ
18. ರೈತನ ಹೆಂಡತಿ
19. ಬಹುಳೆ - ಉತ್ತಮನ ಹೆಂಡತಿ
20. ನಂದಾ - ನಾಗರಾಜನ ಮಗಳು
21. ಶಾರದೆ
22. ಗುರುವ - ಗಿರಿಜನರ ಮುಖಂಡ

ಮತ್ತು ಗಿರಿಜನರು, ಚಾರಕರು ...

ಉತ್ತಮ ಚರಿತೆ ಅಥವಾ ನಾಗನಂದನೆ

ನಾಂದಿ (ಭಾಮಿನಿ)

ಗಜವದನನಡಿಗೆರಗಿ ಮೊದಲಲಿ| ಅಜನ ರಾಣಿಯ ಕೃಪೆಯ ಬೇಡುತ| ತ್ರಿಜಗ ಮಾತೆಯ ಕೀರ್ತಿಸುತ
ಹರಿ ಹರ ವಿರಂಚಿಗಳ ‖ ಭಜಿಸುತಲಿ ನವಗ್ರಹರ ಕವಿಗಳ| ವ್ರಜಕೆ ತಲೆಬಾಗುತ್ತ ಪೇಳುವೆ| ಸುಜನ
ರಂಜಕ ನಾಗನಂದನೆ ವರ ಕಥಾಮೃತವಾ ‖೧‖

ಕಾಂಭೋದಿ ಝಂಪೆ

ಕೇಳು ಧರಿಣಿಪ ಬರ್ಹಿಸ್ಮತಿ ಧರಗೆ ದೊರೆಯಾಗಿ| ಶ್ರೀಲೋಲ ಪದಪದ್ಮ ಭ್ರಮರ ‖ ಬಾಲಭಕ್ತನು
ಧ್ರುವ ಕುಮಾರ ವೈಭವದಿಂದ | ಓಲಗವನಿತ್ತನುತ್ಸಹದಿ ‖೧‖
ಹರಿಯ ನೇಮದಿ ಪುರಕೆ ಮರಳಿ ಮಾತಾಪಿತರ| ಹರಕೆಯೊಂದಿಗೆ ಧರಣಿ ತಲದ ‖ ಅರಸೊತ್ತಿಗೆಯ
ಕೊಂಡು ಉತ್ತಮನ ನೊಡಗೊಂಡು | ಶರಣ ರಕ್ಷಕನಾಗಿ ಮೆರೆದಾ ‖೨‖
ಹೊಂದಿರುವ ಪ್ರಜರು ಸುಖ ನೆಮ್ಮದಿಯ ಬಾಳಿನಲಿ | ನಿಂದಿರುವರೆಂಬ ತೃಪ್ತಿಯಲಿ ‖
ಮಂದಹಾಸದೊಳಿರಲು ಚರನೋರ್ವನೈತಂದು | ವಂದಿಸುತ ಪದಕೆರಗಿ ಪೇಳ್ದ ‖೩‖

ಸಾರಂಗ ಅಷ್ಟ

ದೊರೆಯೆ ಬಿನ್ನಹ ಮಾಳ್ಪೆವು| ನಿಮ್ಮಯ ಪಾದ| ದರುಶನಕ್ಕೈದಿದೆವು‖ ಪರಿಣಯಕಾಗಿ ನಮ್ಮರಸರು
ತಮ್ಮನ್ನು | ಬರುವಂತಾಪ್ಪಾನಿಸಿ ಬರೆದಿಹ ಲಿಖಿತವು ‖೧‖
ಅವನಿಪ ಬಾಭ್ರುವ್ಯರು | ಸ್ವಯಂವರ | ಹವಣಿಸಿಕೊಂಡಿಹರು ‖ ಕುವರಿಯಾಗಿಹ ಬಹುಳೆಯು ಬಹು
ಗುಣವತಿ | ವಿವರ ಪತ್ರಿಕೆಯಲ್ಲಿ ವಿವರಿಸಿಹರು ಜೀಯ ‖೨‖

ಭಾಮಿನಿ

ಚೈತ್ರ ಶುದ್ಧದ ಸಪ್ತಮಿಯ ದಿನ | ಪುತ್ರಿ ಬಹುಳೆಗೆ ಶುಭ ಸ್ವಯಂವರ | ಪುತ್ರ ಮಿತ್ರ ಕಳತ್ರ
ಬಾಂಧವರೊಡನೆ ತಾವುಗಳು ‖ ಚಿತ್ತವಿಸಿ ನವ ದಂಪತಿಗಳಿಗೆ | ಉತ್ತರೋತ್ತರ ಬಯಸಬೇಕೆಂ |
ದರ್ತಿಯಲಿ ಭಿನ್ನಹವು ಇತಿ ಬಾಭ್ರುವ್ಯ ನೃಪವರನ ‖೧‖

ಸೌರಾಷ್ಟ್ರ ತ್ರಿವುಡೆ

ಪತ್ರಿಕೆಯ ವಾಚಿಸಿ ಸುನೀತಿಯ | ಪುತ್ರ ಯೋಚಿಸಿ ಮಲಸಹೋದರ | ಉತ್ತಮನ ಕರೆಸಲ್ಕೆ
ಪದಕೆರ | ಗುತ್ತ ನುಡಿದಾ ‖೧‖
ಏನು ಕಾರಣ ಕರೆಸಿದಿರಿ ಅರಿ | ಸೇನೆಯೈದುವ ವಾರತೆಯೆ ಹದ | ನೇನು ಪೇಳಿರಿ ಎನುತ
ವಿನಯದಿ | ತಾನು ಬೆಸಸೆ ‖೨‖
ಹಗೆಗಳೆಲ್ಲಿಹರೆಮಣಿ ಅನುಜನೆ | ಬಗೆದ ಬಗೆ ಬೇರಿಹುದು ಸುಂದರಿ | ಸುಗುಣೆಯಳ ಕೈಹಿಡಿವ
ಯೋಗವು | ಸೊಗದಿ ಪೋಗು ‖೩‖
ಪಿತೃ ಸದೃಶರಾದ ನೀವೆನ | ಗಿತ್ತ ಆಜ್ಞೆಯೆ ವರ ಪ್ರಸಾದವೆ | ನುತ್ತ ಹರಕೆಯಗೊಂಡು ಪೊರಟನು |
ಉತ್ಸಹದಲಿ ‖೪‖

ಕೇದಾರಗೌಳ ಅಷ್ಟ

ಮದ್ರ ದೇಶದ ಸಿಂಹ ವಿಷ್ಪರವನು ಗುಣ । ಭದ್ರ ತಾನೇರಿರಲು ‖ ಅದ್ರಿ ಸನ್ನಿಭ ಲಗ್ನದಾವ್ವಾ
ತ್ರಿಳಿದು ಸ । ಮುದ್ರ ಘೋಷದಿ ನುಡಿದ ‖೧‖
ಕೇಳಿ ಬಲ್ಲೆನು ಎಣೆಯಿಲ್ಲದ ಸುಂದರಿ । ಲೋಲನಯನೆ ಬಹುಳೆ ‖ ವೇಳೆಗಳೆಯಲೇತಕೆನ್ನು
ತಾ ಪೊರಟನು । ಮೇಲಾದ ಸಂಭ್ರಮದಿ ‖೨‖
ಬರುತ ಪಥದಿ ಇದಿರ್ಗೊಂಡ ಕಳಿಂಗದ । ದೊರೆ ವೀರವರ್ಮನನ್ನು ‖ ಪೊರಟಿರಾವೆಡೆಯ
ಕಿರುನಗೆಯಲಿ ಮನ । ದಿರವ ತಾನಿಂತೆಂದನು ‖೩‖
ಗೆಳೆಯರುಭಯರಲ್ಲಿ ಯಾರಾದರೊಬ್ಬರ । ಲಲನೆ ತಾನೊರಿಸದಿರೆ ‖ ಸುಲಭದಿ ಬಿಡಲಾಗದೆಂ
ನಿಶ್ಚಯಗೊಂಡು । ಗೆಲವಿನಿಂ ಪೊರಟರಂದು ‖೪‖

ಭಾಮಿನಿ

ಬಂದ ರಾಯರುಗಳನು ಬಹಳಾ । ನಂದದಲಿ ಬಾಭ್ರುವ್ಯ ಮನ್ನಿಸಿ । ಕುಂದುದೋರದ ತೆರ
ರಾಜಾಂಗಣದಿ ಕುಳ್ಳಿರಿಸಿ ‖ ನಂದನೆಯ ಸಿಂಗರಿಸಿ ಸಖಿಯರ । ವೃಂದದೊಂದಿಗೆ ಕರೆಸಿ ರಾಯ
ಸಂದಣಿಯ ಪರಿಚಯಿಸಿ ನುಡಿದನು ಮಧುರ ವಚನದಲಿ ‖೧‖

ಸೌರಾಷ್ಟ್ರ ಅಷ್ಟ

ಈತ ಅಂಗಾಧಿಪ ಅತಿರೂಪ ಸಂಪನ್ನ ನೋಡು ತಾಯೆ। ಬಲು। ನೀತಿವಂತನು ನೀಲಕೇತನು ಬಲವಂ
ನೋಡು ತಾಯೆ ‖೧‖
ಮದ್ರಾವನಿಪನು ಸಮುದ್ರ ಭೀಕರನೀತ ಕೇಳು ತಾಯೆ। ಗುಣ। ಭದ್ರನು ಅರಿಗಜ ಪಂಚಾಸ್ಯನೆಂಬರು
ಕೇಳು ತಾಯೆ ‖೨‖
ವರ ಕಳಿಂಗಾಧಿಪ ಹಿರಿ ಪರಂಪರೆಯುಂಟು ಲಾಲಿಸಮ್ಮ । ಕರ । ಗುರಿಯಲ್ಲಿ ಮಿಗಿಲಾದ ದೊರೆಯಿಲ್ಲ
ಎಂಬರು ಲಾಲಿಸಮ್ಮ ‖೩‖
ಉತ್ತಾನಪಾದರಾಯನ ಕಿರಿಯಣುಗನು ಈತನಮ್ಮ । ಹರಿ । ಭಕ್ತಧ್ರುವನ ತಮ್ಮ ಉತ್ತಮ ಗುಣನಾಮ
ಈತನಮ್ಮ ‖೪‖

ಭಾಮಿನಿ

ಪುಂಡರೀಕಾಂಬಕನ ಭಕ್ತನ । ಕಂಡು ಹೊಂಪುಳಿಗೊಂಡು ಹೂವಿನ । ದಂಡೆಯನು ತಾನಿಕ್ಕಿ ಕೊರಳಿಗೆ
ಬಹುಳೆ ನಿಂದಿರಲು ‖ ಮಂಡಲಾಧಿಪ ವಧು ವರರ ಬೀ । ಳ್ಕೊಂಡಿರಲು ರಥವೇರಿ ಗಮಿಸಲು ।
ಪುಂಡರಾಲೋಚಿಸಿದರಿತ್ತಲು ಮಾರ್ಗಮಧ್ಯದಲಿ ‖೧‖

ಹಂಸಧ್ವನಿ ಅಷ್ಟ

ಏನಾಗಿ ಹೋಯಿತಲ್ಲಾ । ಸಭೆಯಲಿ ಅಪ । ಮಾನವೆ ಆಯಿತಲ್ಲಾ ‖ ಭೂನಾಥರೆನಿತೋ ಮಂದಿಗಳು
ನಾವಿರ್ದರು । ಆ ನರಾಧಿಪನನುಜನೆ ಮಾನ್ಯನಾದನು ‖೧‖
ಇದಕೆ ಚಿಂತಿಪುದು ವ್ಯರ್ಥ । ಉತ್ತಮನನ್ನು । ಕದನದಿ ಗೆಲಲು ಸ್ವಾರ್ಥ ‖ ಸುದತಿ ನಮ್ಮೀರ್ವರಲೊಬ್ಬರ
ತಾನೊಪ್ಪಿ । ಮದುವೆಯಾದರೆ ಒಳಿತು ‖೨‖
ಎಂದು ನಿಶ್ಚಯಗೈಯುತ್ತ । ಮುಂದರಿಯುತ್ತ । ಬಂದರವರು ಬಯ್ಯುತ್ತ ‖ ಸ್ಯಂದನವನ್ನಡ್ಡಗಟ್ಟಿ
ನಿಲ್ಲಿಸುತವ । ರೆಂದರು ಗರ್ಜಿಸುತ ‖೩‖

ಶಂಕರಾಭರಣ ಮಟ್ಟೆ

ಎಲ್ಲಿಗೊಯ್ವೆ ಬಹುಳೆಯನ್ನು । ಸಲ್ಲದಿರುವ ವಧುವು ಬಿಟ್ಟು । ರೊಳ್ಳಿತಯ್ಯ ಮೀರಿ ನಡೆಯೆ ।
ಕೊಲ್ಲದುಳಿಯೆನು ‖೧‖
ಏತಕಿಂತ ಮಾತು ಎನಗೆ । ಸೋತು ಮಾಲೆಯಿಕ್ಕಿದವಳು । ನೀತಿ ತೊರೆದು ತಡೆಯ ಬೇಡಿ ।
ಧೂರ್ತರಂದದಿ ‖೨‖
ಕ್ಷಾತ್ರ ಧರ್ಮದಂತೆ ಜಲಜ । ನೇತ್ರೆಯರನು ಬಾಹುಬಲದಿ । ಧಾತ್ರಿಪತಿಗಳೊರಿಸುವಂಥ ।
ರೀತಿಯರಿಯೆಯಾ ‖೩‖
ಹುಚ್ಚು ಮಾತನಾಡಿ ಬರಿದೆ । ರೊಚ್ಚಿಗೇಳಿಸದಿರೆನುತ್ತ । ಎಚ್ಚ ಮಾರ್ಗಣವನು ಮಂತ್ರ ।
ಉಚ್ಚರಿಸುತಲಿ ‖೪‖

ಭಾಮಿನಿ

ರಣದಿ ಉತ್ತಮ ವೀರವರ್ಮರು । ಸೆಣಸುತಿರೆ ಗುಣಭದ್ರ ಬೆಂಗಡೆ । ಕಣೆಯೆಸೆದು ಉತ್ತಮನ
ಕಾರ್ಮುಕ ಕಡಿದು ಕೆಡಹುತಲಿ ‖ ಮಣಿರಥಕೆ ಹಿಡಿದವನ ಬಂಧಿಸಿ । ವನಿತೆ ಬಹುಳೆಯ ತುಡುಕೆ
ಭಯದಿಂ । ಕಣುಗಳಲಿ ನೀರಿಳಿಸಿ ನುಡಿದಳು ಕರವ ಜೋಡಿಸುತ ‖೧‖

ನೀಲಾಂಬರಿ ಆದಿ

ಸೆರಗೊಡ್ಡಿ ಬೇಡುವೆನು । ದಯೆದೋರಿ ಎ ।ನ್ನರಸನ ಬಿಡಿರಿ ಇನ್ನು ‖ ಎರೆಯನ ತೊರೆದು ಹೆಣ್ಣು ।
ಬದುಕಿರಲೆಂತು । ತೆರೆಯಿರಿ ಕರುಣೆಕಣ್ಣು ‖೧‖

ಕೇದಾರಗೌಳ ಅಷ್ಟ

ಕರುಣೆಯ ಮಾತೇಕೆ ಇರಿಸಿ ಮೋಹವ ನಿಂತು । ಇರಿದೆವು ಉತ್ತಮನ ‖ ಮರೆವುದಾತನ
ನಮ್ಮೀರ್ವರಲೊಬ್ಬರನು ನೀನು । ವರಿಸಿ ಸುಖದಿ ಬಾಳ್ವುದು ‖೧‖

ನೀಲಾಬರಿ ಆದಿ

ಒಲಿದು ಮಾಲೆಯನಿಕ್ಕಿದೆ । ಈ ತನುವಿಗಾ । ಗಳಿಗೆಯಿಂದಲೆ ಹಕ್ಕಿದೆ ‖ ತಿಳಿದವರಾಗಿ ಇಂತು ।
ಅಧರ್ಮವ । ತುಳಿದರೆ ಬಾಳಲೆಂತು ‖೧‖

ಕೇದಾರಗೌಳ ಅಷ್ಟ

ಎಷ್ಟು ಪೇಳಿದರು ನಾವ್ ಬಿಡುವವರಲ್ಲೆಂದು । ಸೃಷ್ಟಿಪಾಲರು ಗರ್ಜಿಸಿ ‖ ಕಟ್ಟಿ ಕೊಂಡೊಯ್ಯಲು
ಬೇಹಿನವರು ಕಣ್ಣೀ । ರಿಟ್ಟು ಧ್ರುವನಿಗೆಂದರು ‖೧‖

ಭಾಮಿನಿ

ಲಾಲಿಪುದು ದೊರೆ ವರ ಸ್ವಯಂವರ। ಶಾಲೆಯಲಿ ನಿಮ್ಮನುಜರಿಗೆ ಸುಮ। ಮಾಲೆಬಿದ್ದುದು ಬಹುಳೆ
ಕರದಿಂ ಬಳಿಕ ನಡೆದುದನು ‖ ಪೇಳಲೇನದ ಉಭಯ ಧರಣೀ । ಪಾಲರಾತನ ಬಿಗಿದು ಬಂಧಿಸಿ ।
ಬಾಲೆಯನು ಕೊಂಡೊಯ್ದರೆಂಬುದ ಕೇಳುತ್ತೈದಿದೆವು ‖೧‖

ಘಂಟಾರವ ಅಷ್ಟ

ಚಾರರೆಂದುದ ಕೇಳುತ್ತ ಕೆಂಗಿಡಿ । ಕಾರುತಲಿ ಧ್ರುವನೆಂದ ಸಭೆಯಲಿ । ಸೇರಿರುವ ಜನಜಾಲಕೆ ‖೧‖
ಬಡ ನೃಪಾಲರು ಮರೆತು ಶಿಷ್ಟಾಚಾರ । ತುಡುಕುತನುಜನ ಬಂಧಿಸುತ ಕೈ । ಹಿಡಿದ ಸತಿಯನು

ಹಡೆದ ಮಾತೆಯು ಒಡಲ ಸೇರ್ದರು ಬಿಡೆ | ಬಡಿದು ಕೆಡಹುನೆನೆನುತ ಲೈದುತ | ಶ
ಬಳಿಕಿಂತೆಂದನು ||೩||

ಮಾರವಿ ಏಕ

ಒಂದಡಿ ಮುಂದಿಟ್ಟರೆ ಕೊಲದುಳಿಯೆನು | ಪಂದೆಗಳಿರ ನಿಲ್ಲಿ || ಎಂದಡ್ಡಯಿಸಿದ ಧ್ರುವ
ಕಾಣುತ | ಲೆಂದನು ಗುಣಭದ್ರ ||೧||
ಕಲಕಲನಾದಕೆ ಎಲೆಯುದುರದು ನೀ | ಗಳಹದಿರೆಲೋ ಬರಿದೆ || ಲಲನೆಯ ಪಡೆಯುವ ಧ
ಧರ್ಮಕೆ | ಕಲೆಯಾಗದು ದಿಟವು ||೨||
ಭೂಮಂಡಲಕಧಿನಾಥನ ಸಮ್ಮುಖಿ | ಈ ಮಹಾ ಪೌರುಷವೇ || ಸಾಮದ ನುಡಿ ಸಾಕೆ
ಶರಗಳ | ಸ್ತೋಮದಿ ಕಂಗೆಡಿಸಿ ||೩||

ಭಾಮಿನಿ

ರಣದಿ ಸೋಲನ್ನೊಪ್ಪಿ ಧ್ರುವನಡಿ | ಮಣಿದು ತಮ್ಮಪರಾಧ ಮನ್ನಿಸಿ | ಗುಣನಿಧಿಯೆ ಸಲಹ
ಕರುಣೆಯದೋರಿ ಧ್ರುವನೆಂದಾ || ಮನವು ನಿಮಗಿರೆ ಬನ್ನಿರೆನ್ನುತ | ಘನ ವಹಿಲದಿಂದೈದಿ ನಗ
ಅನುಜನಿಗೆ ವೈವಾಹವೇರ್ಪಡಿಸಿದನು ತ್ವರಿತದಲಿ ||೧||

ಭೈರವಿ ಝಂಪೆ

ಧ್ರುವನೊಂದು ದಿನ ಕರೆಸಿ | ನವ ವಧೂವರರನ್ನು | ವಿವರಿಸಿದ ಮನದಿರವ | ತವಕದಿಂದವರ್ಗೆ |
ಪೋಗು ಕುಶದ್ವೀಪಕ್ಕೆ | ನಾಗವೇಣಿಯ ಕೂಡಿ | ಸಾಗಿಸಧಿಕಾರ ಅನು | ರಾಗ ಗೊಳಿಸುತಲಿ ||೨
ಅತಿಯಾದ ಆಸಕ್ತಿ | ಹಿತವಲ್ಲ ಯಾವತ್ತು | ಮತಿಮರೆತಧರ್ಮದಲಿ | ಗತಿಯನಿಡಬೇಡ ||೩||
ಅಡಿಗೆರಗಿ ಹರಕೆಯನು | ಪಡೆದು ಉತ್ತಮ ಪೀಠ | ವಡರಿ ಕುಶದ್ವೀಪಕ್ಕೆ ಒಡೆಯನೆನಿಸಿದನು |

ಭಾಮಿನಿ

ನೋಡಿ ದಣಿಯನು ಮಡದಿಯಲಿ ಮಾ | ತಾಡಿ ದಣಿಯನು ಹಂಸನಡಿಗೆಯ | ಮೋಡಿ ಉತ್ತಮನ
ಆವರಿಸಿದುದು ಬಹುವಾಗಿ || ನಾಡೆ ಮನ ಹುಚ್ಚೆದ್ದು ಬಹುಳೆಯ | ಕೂಡಿ ಸುಖಿಸುವ ಬಯಕೆಯ
ಓ | ಲಾಡಿ ಅಂತಃಪುರವ ಪೊಗುತಿಂತೆಂದ ಸತಿಯೊಡನೆ ||೧||

ಸುರಟಿ ಏಕ

ಚಂದಿರಮುಖಿ ಬಾಲೆ | ಸರಸಿಜ | ಗಂಧಿನಿ ಸುಕಪೋಲೆ || ಕಂದರ್ಪನ ಶರ ಪಂಚಕದಿಂದ
ಬೆಂದಿಹೆ ನೀನೊದಗುತ ಮುದಗೊಳಿಸೆಲೆ ||೧||

ಶಂಕರಾಭರಣ ಆದಿ

ಪತಿಯ ಸುಖಕೆ ಒದಗಬೇಕು | ಸತಿಯು ಬಲ್ಲೆ ಎನ್ನಮನದ | ಸ್ಥಿತಿಯನರಿಯದಿಂತು ಬಯ
ಹಿತವದೆನಿಸದು ||೧||

ಸುರಟಿ ಏಕ

ಏನು ವಿರಸ ಜಾಣೆ | ಮಿ... ಒದಗದೆ ಪೋದರೆ | ನಾ

ಶಂಕರಾಭರಣ ಆದಿ

ಕಾಯ ಜಾಡ್ಯದಿಂದಲಿಹುದು | ಹೇಯವೆನಿಸುತಿಹುದು ರತಿಯು | ನ್ಯಾಯವಲ್ಲವೆನುತಲೈದೆ |
ತೋಯಜಾಂಬಕಿ ||೧||

ಭಾಮಿನಿ

ಬೆರೆಯ ಬಂದಾತಂಗೆ ತಣ್ಣೀ | ರೆರಚಿ ಪೋದಳು ಬಹುಳೆ ಮನದಲಿ | ತರಹರಿಸಿ ಸಂಯಮವ ಹೊಂದುತ
ಪೊರಟನುತ್ತಮನು || ಗಿರಿಜನರ ಗುರಿಕಾರ ಗುರುವನು | ಸರುವ ಬಾಂಧವ ವರ್ಗ ನೆರಹುತ | ಅರುಹಿದನು
ಆಚರಿಸಲಿಹ ಉತ್ಸವದ ವಿವರವನು ||೧||

ಕಾಂಭೋಧಿ ಏಕ

ಕಾಳ ತಿಮ್ಮ ಶ್ಯಾಮ ಕಾಮ ಕೇಳಿದಪ್ಪ | ನಮ್ಮ | ಕಾಳಿ ಪೂಜೆಯಾವತ್ತೆಂದು ಹೇಳಿರಪ್ಪ ||೧||
ಒಂದು ಮಾಸ ಉಳಿಯಿತಿನ್ನು ನೋಡಿರಪ್ಪ | ಅಂದು | ಒಂದೂ ಕೊರತೆಯಾಗದಂತೆ ಮಾಡಿರಪ್ಪ ||೨||
ಚಂದದಿಂದ ಹಾಡಿ ಪಾಡಿ ಕುಣಿಯಬೇಕು | ಊರ | ಮಂದಿ ಎಲ್ಲಬಂದು ನೋಡಿ ತಣಿಯಬೇಕು ||೩||
ಉತ್ತಮ ಮಹರಾಜ್ರಿಗ್ಗರಲು ಹೇಳಬೇಕು | ಅವರ | ಪತ್ನಿಯವರೂ ಬರುವ ಹಂಗೆ ಕೇಳಬೇಕು ||೪||

ಭಾಮಿನಿ ಅರ್ಧ

ಗುರುವ ಕೆಲ ಜನರನ್ನು ಜತೆಯೊಳ | ಗಿರಿಸಿಕೊಳ್ಳುತ ಉತ್ತಮನ ಪದ | ಕೆರಗಿ ಕಾಣಿಕೆಯಿತ್ತು ನುಡಿದನು
ತನ್ನ ಮನದಿರವ ||

ತೋಡಿ ಅಷ್ಟ

ಅರಸ ಬಿನ್ನಹ ಮಾಳ್ಪೆವು | ತಮ್ಮಯ ಪಾದ | ಕಿರಿಸಿ ಕಾಣ್ಕೆಗಳ ನಾವು || ಪುರದಿಂದ ಹೊರಗಿರ್ಪ
ಗಿರಿಜನರೈ ನಾವು | ಹರಕೆ ಬೇಡಲು ಬಂದೆವು || ಇದ ತಂದೆವು ||೧||
ಹೊಸ ದೊರಿಯಾಗಿ ಬಂದ್ರಿ | ನಮ್ಮವರ್ಗೆಲ್ಲ | ಖುಶಿಯಾಯ್ತು ಸುಖವೆ ತಂದ್ರಿ || ತುಸು ದಿವಸಕೆ
ನಮ್ಮ ದೇವಿ ಉತ್ಸವ ಐತೆ | ಹೊಸ ಜೋಡಿ ಬರಬೇಕೆಂದು || ಬೇಡ್ವೆವು ಇಂದು ||೨||

ಭಾಮಿನಿ ಅರ್ಧ

ನಿಮ್ಮ ಭಕ್ತಿಗೆ ಮುದವನಾಂತೆನು | ಸಮ್ಮತಿಸಿಹೆನು ಪೋಗಿರೆನ್ನುತ | ಧರ್ಮಪತ್ನಿಯ ಬಳಿಗೆ ಸಾರುತ
ಮಗುಳೆ ಪೇಳಿದನು ||

ಕೇದಾರಗೌಳ ಝಂಪೆ

ಮದನನರಗಿಣಿ ಕೋಮಲೆ | ಪ್ರಜರ ಮನ | ಹದನರಿಯ ಬೇಕು ಬಾಲೆ || ಮದನಾರಿ ಸತಿ ಪೂಜೆಗೆ |
ನಾವ್‌ಪೋಗಿ | ಮುದಗೊಳಿಸಬೇಕು ಮೇಗೆ ||೧||
ಗಿರಿಜನರನಾಗರಿಕರು | ಉತ್ಸವಕೆ | ತರತರದ ಜನರು ಬಹರು || ಬರಲು ಮನ ಒಪ್ಪದಿಹುದು |
ನೀವ್ ಪೋಗಿ | ಬರೆ ಸಾಕು ಹೋಗಿ ಬಹುದು ||೨||
ನಿನ್ನನರಗಳಿಗೆ ಬಿಟ್ಟು | ಇರೆ ಜೀವ | ನಿನ್ನಾಣೆ ಬರಿಯ ಹೊಟ್ಟು || ಎನ್ನುತೊಪ್ಪಿಸುತವಳನು |
ಒಡಗೊಂಡು | ಮುನ್ನ ಉತ್ತಮ ಪೊರಟನು ||೩||

ದ್ವಿಪದಿ

ಮಡದಿಯನ್ನೊಡಗೊಂಡು ಬಂದ ದೊರೆಯನ್ನು | ಒಡನೆ ಸತ್ಕರಿಸಿ ನೀಡಿದರು ಪೀಠವನು ‖೧‖
ಹೆಂಡವನು ಖಂಡವನು ನೈವೇದ್ಯ ಮಾಡಿ | ಕೆಂಡದಾರತಿಯೆತ್ತಿ ಪೂಜೆಯನು ನೀಡಿ ‖೨‖
ಹಲವಂಗದಲಿ ಹಾಡಿ ನರ್ತನವ ಮಾಡಿ | ಗೆಲವಿಂದ ಮೈಮರೆತರವರೆಲ್ಲ ಕೂಡಿ ‖೩‖
ಉತ್ತಮದ ಮದ್ಯ ನೈವೇದ್ಯ ಕುಡಿರೆನುತ | ಉತ್ತಮನಿಗೀಯೆ ಕೈಗೊಂಡ ನಸುನಗುತ ‖೪‖

ಸೌರಾಷ್ಟ್ರ ತ್ರಿವುಡೆ

ಬಹುಳೆ ಬಾ ಕಾಳಿಕೆ ಪ್ರಸಾದವು | ಬಹಳ ಉತ್ತಮ ಮದ್ಯ ಸೇವಿಸೆ | ವಿಹಿತ ನಮ್ಮಿಬ್ಬರಿ
ನೆಮ್ಮದಿ | ಬಹುದು ಮನಕೆ ‖೧‖
ಮದ್ಯಸೇವನೆ ಕ್ಷತ್ರಿಯರಿಗೆ ನಿ | ಷಿದ್ಧವಲ್ಲವು ಮಿತವು ಮೀರ್ದೊಡೆ | ಬುದ್ಧಿ ಕೆಡುವುದ
ಮುಟ್ಟಲಾರೆನು | ಬದ್ಧವಾಗಿ ‖೨‖
ಕುಡಿಯದಿರ್ದೊಡೆ ಬೇಡ ಪಾತ್ರೆಯ | ಹಿಡಿದು ನೀನೆ ನೀಡು ತೃಪ್ತಿಯ | ಕೊಡುವುದೆನಗೆನೆ ಬಹು
ನುಡಿದಳು | ಸಿಡುಕಿನಿಂದ ‖೩‖
ನಾನೆ ಮದ್ಯವ ನೀಡಿ ಧರ್ಮ | ಗ್ಲಾನಿ ಗೊಳಿಸುವಳಲ್ಲವೆನುತಲಿ | ಮಾಲಿನಿಯು ಮೊಗದಿರು
ಕೋಪಿಸಿ | ತಾನು ನುಡಿದಾ ‖೪‖
ಪತಿಯ ಮಾತನು ಮೀರಿದಾಕೆಯು | ಸತಿಯೆ ಎನುತಲಿ ಮೀರಿ ಸೇವಿಸಿ | ಖತಿಗೊಳುತ ಮಂತ್ರಿಯನು
ಕರೆಸುತ | ಕ್ಷಿತಿಪ ನುಡಿದಾ ‖೫‖

ಭೈರವಿ ಝಂಪೆ

ಬಾರಿತ್ತ ಸಚಿವ ಮಿತಿ | ಮೀರಿದಾಕೆಯ ನೀನು | ಘೋರಡವಿಯಲು ಬಿಟ್ಟು | ಬಾರಯ್ಯ ಬೇಗ ‖೧‖
ಒಲಿದು ಕೈ ಹಿಡಿದಾಕೆ | ತಿಳುಹಿದರೆ ನೀತಿಯನು | ಕಳುಹಬಹುದೇ ವನಕೆ | ಇಳೆಯಧಿಪನಾಗಿ ‖೨‖
ಕುಡಿಯದಿರೆ ಬಿಡಲವಳು | ಹಿಡಿದರಾ ಪಾತ್ರೆಯನು | ಕೆಡುವುದೇ ಮಡಿ ಎನ್ನ | ನುಡಿ
ಬಂಜೆಯಾಯ್ತು ‖೩‖
ನುಡಿಯದಿರು ಪ್ರತಿಮಾತ | ಒಡೆಯನಾಣತಿ ನಿನಗೆ | ಮಡದಿ ಎನಗಿನ್ನಿಲ್ಲ | ನಡೆ ಎನುತ ಪೊರಟಾ ‖೪‖

ಸಾಂಗತ್ಯ ರೂಪಕ

ಒಡೆಯನಾಣತಿಗೆ ತಾ ಕಡುನೊಂದು ಮಂತ್ರೀಶ | ಪೊಡಮಡುತಲಿ ರಾಣಿಯಡಿಗೆ ‖ ದುಡುಕಿಂದ
ಕೆಡಕಮ್ಮ ನಡೆಯಿರಿ ಪತಿಪಾದ | ಪಿಡಿದು ಕ್ಷಮೆ ಯಾಚಿಸಿರೆನಲು ‖೧‖
ಸಲ್ಲದ ಕಾರ್ಯವ ನೊಲ್ಲೆನು ಯಾವತ್ತು | ವಲ್ಲಭನಾದರೇನಾಯ್ತು ‖ ಎಲ್ಲರ ಕಾವ ಆ ದೇವನೆ ಗತಿ
ಮುಂದೆ | ಸಲ್ಲಿಸು ರಾಜನಾಜ್ಞೆಯನು ‖೨‖
ಸುರಿವ ಕಂಬನಿಯಿಂದ ರಥದಿ ರಾಜ್ಞಿಯನು ಕು | ಳ್ಳಿರಿಸಿಕೊಂಡೊಯ್ದು ಕಾನನಕೆ ‖ ಹರಿಯೇ
ನೀ ಕಾಯೆಂದು ಬೀಳ್ಕೊಂಡು ಸಚಿವ ತಾ | ತೆರಳೆ ಭಾಮಿನಿಯು ಭಯಗೊಂಡು ‖೩‖
ದಟ್ಟವಾದಡವಿಯಲಿ ಬಿಟ್ಟು ಪೋದನಮಾತ್ಯ | ದುಷ್ಟ ಪ್ರಾಣಿಗಳೆಲ್ಲಿ ಬಹವೋ ‖ ಕೆಟ್ಟ ದಾನವರೈದಿದರೆ
ಎನ್ನ ಬಿಡರು ಕೈ | ಬಿಟ್ಟೆಯಾ ಹರಿಯೆ ಎಂದಳಲಿ ‖೪‖
ಮನದಿ ಧೈರ್ಯವ ತಾಳಿ ವನಿತೆ ತಾ ಮೇಲೆದ್ದು | ತನುವಿನಾಸೆಯ ತಾನು ತೊರೆದು ‖ ವನದಾ
ವಿಷಣ್ಣತೆಯನ್ನು ಕಡೆಗಣಿಸುತ್ತ | ಘನ ವೇಗದಿಂದ ಮುಂಬರಿಯೆ ‖೫‖

ಕೇದಾರಗೌಳ ಅಷ್ಟ

ಾಲಪೋತಕನೆಂಬ ನಾಗರಾಜನು ನಿತ್ಯ | ದೋಲಗವಿತ್ತು ತನ್ನ ‖ ಓಲೈಸುವವರ ಮನ್ನಿಸುತೆಂದ
ಮನದಲ್ಲಿ | ಆಲೋಚಿಸಿದ ಬಗೆಯ ‖೧‖
ಕುಶದ್ವೀಪವಿದೆಯಂತೆ ಮರ್ತ್ಯಲೋಕದೊಳೊಂದು | ರಸಿಕರ ನಾಕವಂತೆ ‖ ಹಸನಗೊಳ್ಸರೆ ಮನ
ನೋಡಿ ಬರುವೆನೆಂದು | ಕುಶಲದಿ ಬೀಳ್ಕೊಂಡನು ‖೨‖
ಬರುತಲರಣ್ಯ ಮಾರ್ಗದಿ ಮುಂದೆ ನೋಡಿದ | ತರುಲತೆಯೆಡೆಯೊಳಗೆ ‖ ಎರಳೆಗಂಗಳ ಚೆಲುವೆಗೆ
ಮನವರಳಿತು | ಮರುಳುಗೊಳ್ಳುತಲೆಂದನು ‖೩‖

ಬೇಗಡೆ ಏಕ

ವನದ ದೇವತೆ ದಿವ್ಯ ರೂಪವನಾಂತು ಬಂದಿಹಳೊ | ಕಾಣ್ಬರ | ಮನವ ತಣಿಸಲು ಪಥಕೆ ಹತ್ತಿರ
ಬಂದು ನಿಂದಿಹಳೊ | ಮೆಚ್ಚಿದ | ಇನಿಯನಿಗೆ ಕೊಡಲೆನುತ ಗುಟ್ಟಲಿ ಏನ ತಂದಿಹಳೊ | ಈ ಪರಿ |
ತನುಸಿರಿಯ ತೋರುತ್ತ ರಸಿಕರರೆನಿತು ಕೊಂದಿಹಳೊ | ಈಕೆಯ | ಮನದ ಒಲವನು ಅರಿಯ
ಬೇಕೆಂ | ದೆನುತ ಬಳಿ ಸಾರುತ್ತಲಾತನು | ಅನುನಯದಿ ಬಿನ್ನೈಸಿದನು ತಾ | ನೆಣಿಸಿ ಹಂಬಲಿಸಿರುವ
ಬಗೆಯನು ‖೧‖

ಯಮುನ ಕಲ್ಯಾಣಿ ಅಷ್ಟ

ಯಾರು ನೀ ಹೇಳು ಕೋಮಲಗಾತ್ರೆ | ನಿನ್ನ | ನಾರು ಪೆತ್ತವರು ಸಾರಸನೇತ್ರೆ ‖ ಊರೆಲ್ಲಿ ವರನಾರು
ಕೇಳೆಲೆ | ಇತ್ತ | ಸಾರೆ ಕಾರಣವೇನು ಹೇಳೆಲೆ ‖೧‖

ಆನಂದ ಭೈರವಿ ಏಕ

ಹೇಳಿ ಫಲವ ಕಾಣೆನಯ್ಯ | ಎನ್ನ | ಗೋಳಿನ ಕಥೆ ಏತಕಯ್ಯ ‖ ಆಳಿದನೊಳು ಖತಿ ತಾಳಿ | ಕೆಲ |
ಕಾಲವಾಯ್ತಿಲ್ಲಿರ್ದೆ ಕೇಳಿ ‖೧‖

ಯಮುನ ಕಲ್ಯಾಣಿ ಅಷ್ಟ

ಮುಚ್ಚುಮರೆಯ ಮಾತೆಕೆಲೆ ಬಾಲೆ | ನಿನ್ನ | ಮೆಚ್ಚಿಕೊಂಡಿರುವೆ ನಿಜದಿ ಕೇಳೆ ‖ ಉಚ್ಚಕುಲದ
ನಾಗರಾಜನು | ಮನ | ದಿಚ್ಛೆ ಸಲಿಸಿ ವರಿಸುವೆ ನಾನು ‖೧‖

ಆನಂದ ಭೈರವಿ ಏಕ

ಹೊಲಸು ಮಾತಾಡದಿರಯ್ಯ | ನಾನು | ಕುಲವಧು ಬೇಡುವೆನಯ್ಯ ‖ ತಿಳಿದು ಮುಂದರಿದರೆ ಪಾಪ |
ನಿನ್ನ | ಕೊಲದಿರದೈ ಎನ್ನ ಶಾಪ ‖೧‖

ನಾದನಾಮ ಕ್ರಿಯೆ ಅಷ್ಟ

ಒಲವಿಂದ ನಯವಾಗಿ ಕೇಳ್ದರೆ | ಎನ್ನ | ಕೊಲುವಂಥ ಮನ ಬಂತೆ ಭಾಪುರೆ ‖ ಬಲ ತೋರ್ಪೆನೆನುತ
ಮುಂಬರಿಯಲು | ಕಂಡು | ಕಳವಳಗೊಂಡು ಯೋಚಿಸಿದಳು ‖೧‖
ಬಿಡನೆನ್ನ ಪಾಪಿ ಕಾಮುಕನೀತ | ಮಾನ | ಕೆಡದಂತೆ ಯೋಚಿಸುವುದೆ ನೀತ ‖ ಕಡೆಗಣ್ಣ ಕುಡಿನೋಟ
ಬೀರುತ್ತ | ಬಾಲೆ | ನುಡಿದಳಾತನ ಬಳಿ ಸಾರುತ್ತ ‖೨‖

ಕಲ್ಯಾಣಿ ರೂಪಕ (ಮಿಶ್ರಛಂದಸ್ಸು)

ಕೇಳು ವೀರ ಪೂರ್ವಕಥೆಯನು | ಎನ್ನ ಪತಿಯ | ಖೂಳತನದಿ ಬಂದ ವ್ಯಥೆಯನು ‖ ಹೇಳಲು ವ
ಹೇಸುತಲಿದೆ | ತಾಳುತ ವ್ರತದಲ್ಲಿರೆ ರತಿ | ಕೇಳಿಗೆ ಕರೆ ಒಪ್ಪದೆ ಖತಿ | ತಾಳುತ ನಾ ಪೊರಟಿಹೆನ್
ವೇಳೆಯನ್ನು ಕೊಡುವಿಯಾದರೆ | ನಿನ್ನರಸಿಯಾಗಿ | ಬಾಳಲಿಹೆನು ಮಾತಿದು ಖರೆ ‖೧‖

ಭಾಮಿನಿ

ತರುಣಿಯಾಡಿದ ನುಡಿಗೆ ಫಣಿಪನು | ಭರವಸೆಯ ತಾನಿತ್ತು ಮುದದೊಳು | ಅರಮನೆಗೆ ಕರೆತಂ
ಪೊಗಿಸುತ ಚರರ ಕರೆಸುತಲಿ ‖ ಪರಿಕರವನನುಗೊಳಿಸಲಾಜ್ಞೆಯ | ನಿರಿಸಿ ಪೊರಟನು
ಬಹುಳೆಯು | ಹರಿಯ ನೆನೆಯುತ ವ್ರತದ ನಟನೆಯಲಿರ್ದಳೀಚೆಯಲಿ ‖೧‖

ಕೇದಾರಗೌಳ ಅಷ್ಟ

ಇತ್ತ ಸುಶರ್ಮನೆಂದೆಂಬ ನಾಮಕನು ವಿ | ಪ್ರೋತ್ತಮ ಯಾಗವೊಂದ ‖ ಉತ್ತಮ ತೆರದಿ ಪೂರ್
ಸಾಮಾಗ್ರಿಯ | ಹೊತ್ತು ಬಂದನು ಮನೆಗೆ ‖೧‖

ಪೆದ್ದು ಕುಮಾರ ಸುದೇವನ ಕರೆದೆಂದ | ಇದ್ದಿಯಾ ಸೌಖ್ಯದಿಂದ ‖ ಶುದ್ಧ ಶುಂಠಿಯು ನಿನ್ನ ಮಾ
ಎಲ್ಲಿಹಳೆನೆ | ಎದ್ದುಹೊರಗೆ ಬಂದಳು ‖೨‖

ನೆತ್ತಿಗೇರಿದ ಪಿತ್ಥ ಇಳಿದಿಲ್ಲವೆ ಇಲ್ಲಿ | ಸತ್ತರೂ ಕೇಳ್ವರಿಲ್ಲ ‖ ಮತ್ತೆಲ್ಲಿ ಯಾಗದ ಕರೆಯುಂ
ಹೇಳಿರಿ | ನಿತ್ಯವೂ ಒಂದೇ ರಾಗ ‖೩‖

ಬಲು ಯಾಗವೊಂದಿದೆ ನಾಳೆ ಪೋಗುವೆನೆನೆ | ಲಲನೆ ಕೋಪಿಸೆ ಸುದೇವ ‖ ಹಲು ಕಿರಿಯುತ ತಾನ
ಬರುವೆನೆಂದೆನೆ ಒಪ್ಪಿ | ಮಲಗಲು ಅಣಿಯಾದರು ‖೪‖

ಸೌರಾಷ್ಟ್ರ ತ್ರಿವುಡೆ

ಉತ್ಪಲಾವನ ದೊರೆ ಬಲಾಕನು | ದೈತ್ಯ ಸಂದೋಹವನು ಕೂಡುತ | ಅತ್ಯಧಿಕ ವೈಭವದಿ ಓಲಗ
ವಿತ್ತು ನುಡಿದಾ ‖೧‖

ಅಸುರ ವಂಶದಿ ಜನನವಾದರೂ | ಅಸುರ ವೈರಿಯ ತಪದಿ ಮೆಚ್ಚಿಸಿ | ಅಸಮವೆನಿಸುವ ವರ
ಪಡೆದಿಹೆ | ಉಸುರಲೇನು ‖೨‖

ಸುರರ ತೆರದಲಿ ಹವಿಯ ಸೇವಿಪ | ನರರ ದುರ್ಗುಣಗಳನು ಮಾಜಿಪ | ನಿರತ ಸನ್ಮಾರ್ಗದ
ಸಾಗುವ | ವರವ ಪಡೆದೆ ‖೩‖

ಆರ ಭಯ ನನಗಿನ್ನು ಶ್ರೀ ಹರಿ | ಆರ್ಯಕೆ ದೊರೆತಿರಲು ಎನುತಿರೆ | ಚಾರನೋರ್ವನು ಅ
ಗೆರಗುತಲಿ | ಭೋರನೊರೆದಾ ‖೪‖

ಮುಖಾರಿ ಏಕ

ಬಿನ್ನಹ ದೈತ್ಯಕುಲ ದೀಪ | ಸಂತಸದ ವಾರ್ತೆ | ಯನ್ನು ತಂದಿರ್ಪೆನು ಪ್ರತಾಪ ‖ ನನ್ನಿ ಮಾತ
ಜಗ | ವನ್ನು ತಿರುಗೆ ನಿ | ಮ್ಮನ್ನು ಹೊಗಳುವರೆ | ಎನ್ನಲೇನು ದೊರೆ ‖೧‖

ಯಾಗ ಕುಶದ್ವೀಪದಲ್ಲೊಂದ್ಯೆತೆ | ನಿಮಗೊಂದು ಒಳ್ಳೆ | ಯೋಗ ತಾನಾಗಿಯೆ ಬಂದ್ಯೆತೆ ‖ ಸಾಗುತಲಿ
ಹವಿ | ಭೋಗಪಡೆದು ಖುಶಿ | ಯಾಗಿ ಸುಶರ್ಮರು | ಹೋಗಿ ನಡೆಸುವರು ‖೨‖

ಭೈರವಿ ಏಕ

ಚರನೆಂದಾ ನುಡಿ ಕೇಳಿ | ಖಳ | ನುರೆ ಸಂತಸವನೆ ತಾಳಿ ‖ ಕರೆದಿತ್ತನು ಧನಕನಕ | ಚರ | ರಿರಿಸಿದ ತಾ
ಬರುವನಕ ‖೧‖

ಕೆಲದಿನವಾಯಿತು ಜನ್ನ | ಊ | ರಲಿ ಆಗದೆ ಬಲು ಬನ್ನ ‖ ಫಲಿಸಿತು ಹವಿಯನ್ನುಂಡು | ಬಲು |
ಗೆಲವಿಲಿ ಬಹೆ ಮುಂಕೊಂಡು ‖೨‖

ಯಾಗ ಶಾಲೆ ಒಳಗಮಿಸೆ | ಅತಿ | ಯಾಗಿ ಜ್ವಾಲೆ ಪ್ರಜ್ವಲಿಸೆ ‖ ರೇಗಿ ಬಲಾಕ ಋತ್ವಿಜನ | ಕಂಡು |
ಕೂಗಿ ನುಡಿದ ನೀ ಹದನ ‖೩‖

ಭೈರವಿ ಝಂಪೆ

ಎಲವೊ ವಿಪ್ರೋತ್ತಮರೆ | ಒಳಗೆ ಬರದಂತಗ್ನಿ | ಜ್ವಲಿಸುತಿದೆ ಏನಿದುವೆ | ಬಲವಾದ ಕಾರ್ಯ ‖೧‖
ಸುರರ ತೃಪ್ತಿಗೆ ನಾವು | ಜರಗಿಸುವ ಯಜ್ಞ ಅಸು | ರರಿಗಾಗಿ ರಕ್ಷೋಘ್ನ | ವಿರಚಿಪುದು ಧರ್ಮ ‖೨‖
ದೆಸೆಯಧಿಪರಲಿ ನಿಋತಿ | ಅಸುರನಲ್ಲವೆ ಸ್ವಾಮಿ | ಅಸುರಾರಿ ಹವಿಯುಣಲು | ಉಸುರಿಹನು
ಎನಗೆ ‖೩‖
ವಿಧಿಯಂತೆ ಎಸಗಿರ್ಪೆ | ನಿದನು ಬದಲಿಸಲಾರೆ | ಒದೆದು ಬಾರೆಂದೆನಲು | ಹೃದಯ ತಲ್ಲಣಿಸೆ ‖೪‖
ಇಷ್ಟು ಜನರೆದುರಿನಲಿ | ನಷ್ಟವಾದುದು ಮಾನ | ಭ್ರಷ್ಟ ಭೂಸುರನನ್ನು | ಎಷ್ಟಕ್ಕೂ ಬಿಡೆನು ‖೫‖

ದ್ವಿಪದಿ

ತನಗಿಂತು ಅವಮಾನ ವೆಸಗಿದನು ವಿಪ್ರ | ಜನುಮ ಹಾಳ್ಗೈಯದೆಯೆ ಇರಲಾರೆ ಕ್ಷಿಪ್ರ ‖೧‖
ರಮಣಿಯಗಲಿದರೆ ನಿತ್ಯದ ಅಗ್ನಿಕರ್ಮ | ಕ್ರಮದಂತೆ ಎಸಗಲಾರನು ಇದುವೆ ಧರ್ಮ ‖೨‖
ಇದಕೆ ದಾರಿಯದೇನೆನುತ್ತ ಚಿಂತಿಸಿದ | ಹದನರಿತು ತನ್ನೊಳಗೆ ತಾನೆ ಹರ್ಷಿಸಿದ ‖೩‖

ಹಿಂದೂಸ್ಥಾನಿ ಕಾಪಿ ರೂಪಕ

ಭಲರೆ ಇದುವೆ ಯೋಗ್ಯವಿಹುದು | ಫಲವನೀವ ಕಾರ್ಯವಹುದು | ಲಲನೆಯೊಡನೆ ರಾತ್ರಿ
ವೇಳೆ | ಮಲಗಿರುವುದ ಕಂಡಾ ಮೇಲೆ ‖೧‖

ಮಾಯಕದೊಳು ಒಳಗೆ ನಡೆದು | ತೋಯಜಾಕ್ಷಿಯನ್ನು ಹಿಡಿದು | ಸಾಯದಂತೆ ರಕ್ಷಿಸುವೆನು |
ನ್ಯಾಯ ಮೀರಿ ನಡೆಯದಿಹೆನು ‖೨‖

ಭಾಮಿನಿ

ಕದವು ಮುಚ್ಚಿರುವಂತೆ ರಕ್ಕಸ | ಸದನದೊಳಪೊಗುತವಳನೆತ್ತುತ | ಮುದದಿ ತಂದಿಳಿಸಿದನು ಉತ್ಪಲ
ವನದ ಮಧ್ಯದಲಿ ‖ ಸುದತಿ ತಾನೆಚ್ಚರಿತು ದೈತ್ಯನ | ವದನ ವೀಕ್ಷಿಸಿ ಚೀರಿಕೊಂಡಳು | ಬೆದಬೆದರಿ
ಕೈಮುಗಿಯುತಾತನಿಗೆಂದಳಿಂತೆನುತ ‖೧‖

ಶಂಕರಾಭರಣ ಏಕ

ಏತಕೆನ್ನ ತಂದೆಯಯ್ಯ | ನೀತೆರಳಿಸು ಹಿಂದೆ ಮನವು | ಭೀತಿಗೊಳ್ವದೆನಲು ನುಡಿದ |
ಯಾತುಧಾನನು ‖೧‖

ನಿನ್ನ ಪತಿಯು ಎನ್ನ ಬಗೆಗೆ | ಗನ್ನಗತಕವನ್ನು ಗೈದ | ಮುನ್ನ ಪ್ರತೀಕಾರವಾಗಿ | ನಿನ್ನ ತಂದಿಹೆ ‖೨‖
ಹಿಡಿದು ತಿಂಬೆಯೇನು ಎನ್ನ | ಒಡವೆ ಬೇಕೆ ಮಾನವನ್ನು | ಕೆಡಿಸಲಿಹೆಯಾ ಬಿಡು ದಮ್ಮಯ್ಯ |
ದಢಿಗ ದಾನವಾ ‖೩‖

ತಿನ್ನಲಾರೆ ನಂಬು ಮಾನ| ವನ್ನು ಕಳೆಯೆ ಈ ಪ್ರದೇಶ| ವನ್ನು ಬಿಟ್ಟು ಹೋಗಬೇಡ| ಎನ್ನುತ್ತೈದಿದ್ದಾ

ಭಾಮಿನಿ

ನಿದ್ರೆಯಿಂದೆಚ್ಚೆತ್ತ ಭೂಸುರ | ಹೊದ್ದು ಮಲಗಿದ ಸತಿಯ ಕಾಣದೆ | ಪೆದ್ದನಾದ ಸುದೇವನ
ಎಬ್ಬಿಸಿ ವಿಚಾರಿಸಿದಾ || ಇದ್ದ ಅಗಳಿಯು ಇದ್ದ ತೆರನಿರೆ | ಕದ್ದವನ ತಿಳಿಯಲ್ಕೆ ಉತ್ತಮ | ನಿ
ಕಡೆಗಾಗಮಿಸಿ ಪೇಳಿದ ಭಯದ ಭಾರದಲಿ ||೧||

ವರಾಳಿ ಅಷ್ಟ

ಉತ್ತಮ ಭೂಮಿಪಾಲಾ| ದುಃಖದ ವಾರ್ತೆ| ಬಿತ್ತರಿಸುವೆನು ಕೇಳಾ || ಪತ್ನಿ ಪುತ್ರನ ಕೂಡಿ ಮಲ
ಸತಿಯನ್ನು | ಧೂರ್ತರು ಮಾಯಕದಿಂದ ಕದ್ದೊಯ್ದರು ||೧||
ರದನ ಮುಂದಕೆ ಚಾಚಿದೆ| ನಾಸಿಕವು ತಾ| ಹದಕಿಂತ ತುಸು ಮೀರಿದೆ || ವದನ ಚಿಕ್ಕದು ಕುರೂಪಿ
ಪ್ರತಿ ಮಾತಿಗೂ | ಬದಲಾಡುವಳು ಗುಣದಲಿ ಕ್ರೂರಿ ಇಹಳಯ್ಯ ||೨||
ಸತಿಯ ರಕ್ಷಣೆ ಭಾರವು | ಯಾವತ್ತಿಗೂ | ಪತಿಗೆ ಸೇರಿದೆ ನ್ಯಾಯವು || ಜೊತೆ ತಪ್ಪೆ ವರ್ಣ ಸಂಕ
ದೋಷ ಕರ್ಮದ | ಗತಿ ಕೆಡುವುದು ಧರ್ಮಕಾಯ್ದು ಉದ್ಧರಿಸಯ್ಯ ||೩||

ಸೌರಾಷ್ಟ್ರ ತ್ರಿವುಡೆ

ಬಿಡಿರಿ ಭಯ ಯಾವೆಡೆಯೊಳಿದ್ದರು | ಹುಡುಕಿ ತಹೆ ನೀವ್ ತೆರಳಿರೆನ್ನುತ | ಪಡೆಸಹಿತ ಪ್ರ
ವಂಟನಲ್ಲಿಂ | ಪೊಡವಿಪಾಲ ||೧||
ಬರುವ ಮಾರ್ಗದಿ ಋಷಿಗಳಾಶ್ರಮ | ವಿರಲು ತಾನೇಕಾಂಗಿಯಾಗಿಯೆ | ಭರಿತ ವಿನಯದಿ ಪೊ
ಮುನಿಯಡಿ | ಗೆರಗೆ ತಿಳಿದು ||೨||
ನಿನಗೆ ಮಧುಪರ್ಕಾದಿಯನು ವಿಧಿ | ಗನುಸರಿಸಿ ಕೊಡಲಿಹೆನು ಮಜ್ಜನ | ವನು ರಚಿಸಿ ಬಾರೆನು
ಕಳುಹಲು | ಜನಪ ತೆರಳೆ ||೩||
ಈತನರ್ಹನೆ ಅರ್ಘ್ಯಕಾತನ | ನೀತಿ ಬಲ್ಲಿರಿ ಎನಲು ಶಿಷ್ಯನು | ಖ್ಯಾತ ಋಷಿ ತಿಳಿದೊ
ಬಂದನು | ಭೂತಳೇಶ ||೪||

ಸಾಂಗತ್ಯ ರೂಪಕ

ಉತ್ತಮನಿಗೆ ಮುನಿಪೋತ್ತಮ ಆಸನ | ವಿತ್ತು ತಾ ಪೇಳಿದನವಗೆ || ಇತ್ತ ನೀನ್ಯೆತಂದ ಹದನೇ
ಪೇಳೆನೆ | ಪೃಥ್ವಿಪಾಲನು ಶಂಕೆ ಗೊಳುತ ||೧||
ಯಾವ ಕಾರಣದಿಂದ ತಮ್ಮ ನುಡಿಯು ಬದ | ಲಾವಣೆಯಾಯಿತೋ ಅರಿಯೆ | ನೀ
ಬಲ್ಲಿದರವಮಾನಿಸಲಾಪುದೆ | ಭೂವರ ತನಗೆನೆ ಮುನಿಯು ||೨||
ಸ್ವಾಯಂಭು ಮನುವಿನ ಪೌತ್ರಗೆ ಅರ್ಘ್ಯವು| ನ್ಯಾಯವೆ ಸಂಶಯವಿಲ್ಲಾ || ಜಾಯೆಯ ತ್ಯಜಿಸಿದವ
ಮಧುಪರ್ಕವ | ನೀಯೆ ಅಧರ್ಮವು ಸಲ್ಲಾ ||೩||
ಮನನೊಂದು ಭೂಪಾಲ ಚಿಂತಿಸಿದನು ತನ್ನ | ವನಿತೆಯ ತ್ಯಜಿಸಿದಕಾಗಿ || ಮುನಿಪನೊಡ
ತೋರಗೊಡದೆ ಕೇಳಿದ ಭೂಸು | ರನ ಪತ್ನಿ ಇಹ ಠಾವದೆಲ್ಲಿ ||೪||
ಉತ್ಪಲಾವನದಲ್ಲಿ ಅದ್ರಿ ಎಂಬಸುರನ | ಪುತ್ರ ಕೊಂಡೊಯ್ದು ಇಟ್ಟಿಹನು || ಪೃಥ್ವಿಪಾಲನ ಧರ್ಮ
ಹೋಗೆಂದು ಹರಸುತ್ತ | ಉತ್ತಮನನು ಬೀಳುಗೊಂಡ ||೫||

ಭಾಮಿನಿ ಅರ್ಧ

ಅರಸ ಉತ್ಪಲವನದಿ ಬಿಲ್ವದ | ಮರದ ಕೆಳಗಡೆ ಫಲವ ಮೆಲ್ಲುತ | ಇರುವವಳ ತಾ ಕಂಡು
ಸಂಶಯಗೊಂಡು ನುಡಿಸಿದನು ||

ದೇಶಿ ಅಷ್ಟ

ಪರಮ ಸುಂದರಿ ಯಾರು ಬಂದುದೆಲ್ಲಿಂದ | ಒರೆ ಕಾರಣವ ಕಾನನಕೆ ನೀನು ಬಂದ || ಕರೆದು
ತಂದರೊ ನಿನ್ನ ಬಲಾತ್ಕಾರದಿಂದ | ಮರೆಮಾಜದುಸುರು ಬಗೆ ಹರಿಪೆ ತಾನೆಂದ ||೧||
ಏನ ಹೇಳಲಿ ಎನ್ನ ಗೋಳಿನ ಕಥೆಯ | ದಾನವನೋರ್ವ ತಂದಿಟ್ಟಿಹ ಬಗೆಯ || ಮಾನಿನಿ ನಾನು
ಸುಶರ್ಮ ವಿಪ್ರರಿಗೆ | ನೀನಾರೆಂಬುದ ಪೇಳು ಸಟೆಯಾಡದೆನಗೆ ||೨||
ಕುಶದ್ವೀಪದಧಿಕಾರಿ ಉತ್ತಮನಮ್ಮ | ಹಸನಾಯ್ತು ಬಾಳಿನ್ನು ಬೆದರ ಬೇಡಮ್ಮ || ಅಸುರನ ಸದೆದು
ನಿಮ್ಮವರೀರ್ವ ಎಡೆಗೆ | ಕುಶಲದಿ ಕಳುಹುವೆ ಭಯವಿಲ್ಲವೆನಗೆ ||೩||

ಭಾಮಿನಿ

ಮಾನಿನಿಯ ಸಂತೈಸಿ ಉತ್ತಮ | ಸೇನೆಯನು ನೆರಹುತ್ತ ಚಾರನ | ದಾನವನ ಬಳಿಗಟ್ಟೆ
ವಾರ್ತೆಯನೀಯಲವರಂದು || ಏನಿದಚ್ಚರಿ ಧಾರಿಣೀಪತಿ| ತಾನೆ ಬಂದನೆ ಎನುತ ಹರ್ಷಿಸಿ| ಕಾಣಿಕೆಯ
ಕೈಗೊಳುತ ಬಂದಡಿಗೆರಗಿ ಪೇಳಿದನು ||೧||

ಕೇದಾರಗೌಳ ಝಂಪೆ

ಏನಿದಚ್ಚರಿ ಈಪರಿ | ನೀವಾಗಿ | ಸೇನೆಯೊಂದಿಗೆ ಬಂದಿರಿ || ಏನಾಗ ಬೇಕು ಪ್ರಭುವೆ |
ಕ್ಷಣದೊಳಗೆ | ನಾನೆ ಸಾಧಿಸಿ ತೋರುವೆ ||೧||
ದನುಜರಿಗೆ ಹೊರತು ನೀನು | ನೀ ತೋರ್ದ | ವಿನಯಕ್ಕೆ ಸೋತೆ ನಾನು || ಅನುಮಾನ ಒಂದೆ
ನೋಡು | ಪರವಧುವ | ನನುಭವಿಸೆ ನಿಜಕು ಕೇಡು ||೨||
ಎನ್ನ ತುತ್ತಿಗೆ ತಡೆಯನು | ತಾನೊಡ್ಡಿ | ಎನ್ನನವಮಾನಿಸಿದನು || ಎನ್ನುತಲಿ ಪ್ರತಿಕಾರಕೆ | ನಾ
ತಂದೆ | ತಿನ್ನೆ ಅನುಭವಿಸೆ ನಿಜಕೆ ||೩||
ನಿನಗೆ ಕೊಡಿಸುವೆ ಹವಿಯನು| ದ್ವಿಜನಿಂದ| ಅನುಮಾನ ಪಡದೆ ನೀನು || ವನಿತೆಯನು ಒಪ್ಪಿಸಲ್ಕೆ|
ಮಿತ್ರ ನೀ | ನೆನಗಹುದು ಕೇಳು ನಿಜಕೆ ||೪||

ಭಾಮಿನಿ

ಒಂದುಗೊಳುತವರೆಲ್ಲ ವಿಪ್ರನ | ಮಂದಿರಕೆ ಬರೆ ದನುಜ ತಾ ಮನ | ನೊಂದು ಕ್ಷಮೆಯಾಚಿಸುತ
ಸತಿಯನ್ನಿತ್ತ ವಿಪ್ರನಿಗೆ || ಮಂದಗಮನೆಯ ದುರ್ಗಣವ ತಾ | ನಂದಿಸಿದ ಧರಣಿಪಗೆ ನೆನೆದೊಡೆ |
ಬಂದಪೆನು ತಾನೆನುತನುಜ್ಞೆಯಗೊಂಡು ಪೊರವಂಟ ||೧||

ಮಧ್ಯಮಾವತಿ ತ್ರಿವುಡೆ

ಫಣಿಪನಣುಗೆಯು ನಂದ ತನ್ನರ | ಮನೆಯೊಳಗೆ ಕೆಲ ದಿನಗಳಿಂದಲಿ | ವನಿತೆಯೋರ್ವಳು
ಆಚರಿಸುತಿಹ | ಘನ ವ್ರತವನು ನಿರೀಕ್ಷಿಸಿ || ಯೋಚಿಸಿದಳು ||೧||
ಯಾರಿವಳು ಏಕಿಲ್ಲಿ ಬಂದಳು | ತೋರುವುದು ಮಾಂಗಲ್ಯ ಕೊರಳೊಳು | ನಾರಿಯಳ ಎನ್ನಯ್ಯ
ತರಲಿಕೆ | ಕಾರಣವದೇನೆಂಬುದ || ಅರಿಯಲೆನುತ ||೨||

ಬಂದು ಅವಳಡಿಗೆರಗಿ ಕೇಳ್ದಳು | ನೊಂದು ಕೊಳದಿರು ತಾಯೆ ನೀವಾ | ರೆಂದು ವ್ರತವೇನ
ಪೇಳ್ವುದು | ಒಂದುಳಿಯದೆನ್ನೊಂದಿಗೆ || ಎನುತ ನುಡಿಯೆ ||೩||

ಕಾಂಭೋದಿ ಏಕ

ಏನ ಹೇಳಲಮ್ಮ ಒದಗಿ ಬಂದ ದುಸ್ಥಿತಿ | ಇದನು | ನಾನೆ ಕೊಂಡಂತಾಯ್ತೊ ಏನೊ ತಿಳಿ
ಮಮ ಪತಿ ||೧||

ಉತ್ತಮರು ಪ್ರಜರ ಉತ್ಸವದಲಿ ಒಂದಿನ | ಪಾನ | ಮತ್ತರಾಗಿ ಅಡವಿಗಟ್ಟಿಬಿಟ್ಟರೈ ಎನ್ನ ||೨||
ಕಂಡು ಎನ್ನ ಅಡವಿಯಲ್ಲಿ ನಿನ್ನ ಜನಕನು | ಮೋಹ | ಗೊಂಡು ತಾನೆ ವರಿಪೆನೆಂದು ತಂದರೆನ್ನನು
ಒಂದು ವರ್ಷದವಧಿ ಎಂದು ಸಟೆಯನಾಡಿದೆ | ವ್ರತದಿ | ನಿಂದು ಇಂದು ತನಕ ದಿನವ ಹೇ
ದೂಡಿದೆ ||೪||

ಹೆಣ್ಣು ನೀನು ಕಾಯಬೇಕು ಎನ್ನ ಮಾನವ | ಎಂದು | ಕಣ್ಣನೀರನಿಳಿಸೆ ನಂದಾ ತಾಳ್ದು ಕೋಪವ

ಕಾಂಭೋದಿ ರೂಪಕ

ಕೇಳಲಾರೆನು | ತಾಯಿ | ಕೇಳಲಾರೆನು ||ಪ|| ಖೂಳತನದಿ ವರ್ತಿಸುತ್ತ | ಹಾಳುಗೈವ ಪುರು
ಮೊತ್ತ | ಮೇಲುಲೋಕದಲ್ಲೂ ಇಹರೆ | ಸಾಲದುದುಕೆ ಇಲ್ಲು ಅರರೆ ||ಅ.ಪ||

ಮದ್ಯಪಾನದಿಂದಲವರ | ಬುದ್ಧಿ ಕೆಡುವುದೆಂದು ತಿಳಿದು | ಮುಗ್ಧೆಯರಿಗು ಕುಡಿಸುವಂಥ
ಪೆದ್ದರಿರುವರೆಂಬ ಮಾತು ||೧||

ಮುದ್ದು ಮಡದಿ ಮನೆಯೊಳಿರಲು | ವೃದ್ಧನಾದ ಎನ್ನ ಪಿತನು | ಗೃಧ್ರದೃಷ್ಟಿ ಬೀರಿ ನಿಮ್ಮ
ಹೊದ್ದಲೆಂದು ತಂದ ಮಾತು ||೨||

ಭಾಮಿನಿ ಅರ್ಧ

ಮಾನವನು ನಾ ಕಾಯ್ವೆ ಇದಕನು | ಮಾನಗೊಳದಿರು ಎನುತ ಧೈರ್ಯವ | ಮಾನಿನಿಗೆ ತಾನೊರೆ
ಪೊರಟಳು ಶಿಲ್ಪಿ ಇದ್ದೆಡೆಗೆ ||

ಕೇದಾರಗೌಳ ಅಷ್ಟ

ಅಲಕನೆನ್ನುವ ನಾಗ ಶಿಲ್ಪಿ ಕೆತ್ತನೆ ಕಾರ್ಯ | ದಲಿ ಇರೆ ನಂದಾ ಬರೆ || ಘಳಿಲನಾಸನವಿತ್ತು ಬರಲೇನ
ಕಾರಣ | ತಿಳುಹಬೇಕೆನತಿಂದಳು ||೧||

ಗುಟ್ಟಿನ ಮಾತಿದು ಎನ್ನಯ ಜನಕನು | ಕೆಟ್ಟ ಕೃತಿಗೆ ಇಳಿದಿಹನು || ಸೃಷ್ಟೀಶನರಸಿಯನತಿಗುಪ
ಜಾಗದ | ಲಿಟ್ಟು ಮಾನವ ಕಾವುದು ||೨||

ರಾಜನಿಷ್ಟಕೆ ಅಡ್ಡಬರೆ ಜನರೆನ್ನನು | ರಾಜದ್ರೋಹಿ ಎನ್ನರೆ || ರಾಜನು ಅರಿತನಾದರೆ ಇಡನೆನ್ನನು
ರಾಜನಂದನೆ ಬೇಡಮ್ಮ ||೩||

ನಾರಿಧರ್ಮವ ಕಾವ ಕಾಯಕಕಾಗಿ ಶ | ರೀರ ಹೋದರು ಶ್ರೇಯವು | ತೋರಿ ಕೃಪೆಯ
ಪಿತನರಿಯದಂದದಿ ಉಪ | ಕಾರವೊಂದೆಸಗಬೇಕು ||೪||

ಭಾಮಿನಿ

ನಂದಳೆಂದುದಕೊಪ್ಪಿ ಅಲಕನು | ಒಂದು ಮಾಸದಿ ಅರೆಯ ಕೊರೆಯು | ತ್ತೊಂದು ಮಂದಿರ
ರಚಿಸಿದನು ಯಾರರಿಯದಂದದಲಿ || ಮಂದಗಮನೆಯನಿರಿಸಿ ಅವಳಿಗೆ | ನಂದಳೆ ಪ್ರತಿದಿವಸ
ಉಣ್ಣಲು | ತಂದು ಕೊಡುತೀ ತೆರದಿ ಸಂದುದು ಕೆಲವು ದಿವಸಗಳು ||೧||

ಕಾಂಭೋದಿ ಝಂಪೆ

ಅವಧಿ ಮುಗಿದುದು ಎಂದು ಸಾಲವೋತಕ ತನ್ನ | ಭವನವನು ಪೊಕ್ಕು ಎಲ್ಲೆಡೆಯ || ತವಕದಲಿ
ಹುಡುಕಿದರೆ ಬಹುಳೆಯನು ಕಾಣದಿರೆ | ಕುವರಿ ನಂದಳ ಕರೆಸಿಕೇಳ್ದ ||೧||

ಎತ್ತ ಪೋದಳು ಬಹುಳೆ ಅವಳೊಡನೆ ಸಲುಗೆಯಲಿ | ಇತ್ತೀಚೆ ನೀನಿರುವಿಯಂತೆ || ಭೃತ್ಯರೆನಗೀ
ವಾರ್ತೆ ಇತ್ತಿಹರು ವಂಚಿಸದೆ | ಸತ್ಯ ನುಡಿಯೆಂದು ಗರ್ಜಿಸಲು ||೨||

ಕೊಂಡೆಯದ ನುಡಿಕೇಳಿ ಕೆಂಡವಾಗಲು ಬೇಡಿ | ಕಂಡವಳು ನಾನಲ್ಲ ಸತಿಯ || ಕಂಡರೂ ಪರವಧುವ
ಬಯಸುತಿರ್ಪಗೆ ಪೇಳೆ | ತುಂಡಾಗದಿರದು ನಾಲಗೆಯು ||೩||

ನುಡಿಗೆ ಅರಗಿಳಿಯೆಂದು ಮುದ್ದಿನಲಿ ನಾನಿನ್ನ | ನಡೆಸಿಕೊಂಡರೆ ಎನ್ನ ಸುಖವ || ಕೆಡಿಸಿ
ಪ್ರತಿನುಡಿಯಾಡಿದುದಕೆ ಶಾಪವು ಜಿಹ್ವೆ | ಕೆಡೆದು ನೀ ಮೂಗಿಯಾಗೆಂದ ||೪||

ಗರ ಬಡಿದು ಮಾನಿನಿಯು ಧರೆಗುರುಳಿ ನಾಲಗೆಯು | ಹೊರಳದಿರೆ ಪಿತನ ಪದ ಪಿಡಿದು || ಮರುಗುತಿರೆ
ಇದನರಿತು ಅಲಕ ತಾನೈತಂದು | ಒರೆದನಿಂತೆನುತ ಫಣಿಪನಿಗೆ ||೫||

ಜಂಜೂಟಿ ಅಷ್ಟ

ಸಿಟ್ಟಾಗವಧರಿಸಯ್ಯ | ಶಾಪ | ಕೊಟ್ಟರೆ ಬಾಳು ಹೇಗಯ್ಯ || ಎಷ್ಟೆಂದರಾಕೆ ನಿಮ್ಮಯ
ಸುತೆಯಲ್ಲವೆ | ಕೊಟ್ಟು ಪ್ರತಿ ಶಾಪವನು ಮಮತೆಯ | ನಿಟ್ಟು ಪಾಲಿಸಬೇಕು ಬೇಡುವೆ ||೧||

ಮಾರವಿ ಏಕ

ಯಾರು ನೀ ಎನ್ನ ವಿಚಾರಿಸ ಹೊರಟವ | ಸಾರು ಇಲ್ಲಿಂದ ಬೇಗ || ತೋರಲು ಕರುಣೆಯ ಸಂಬಂಧ
ನಿನಗೇನು | ನಾರಿಯ ಜನಕ ನಾನು ||೧||

ಜಂಜೂಟಿ ಅಷ್ಟ

ಕೊಡದಿರೆ ಅವಳ್ಗೆ ವಿಶಾಪ | ಮತ್ತೆ | ಕೊಡು ಎನಗಂತಹದೆ ಶಾಪ || ಪೊಡವಿಪನರಸಿಯ ಮಾನವ
ಕಾಯಲು | ಕಡುತರದ ಕಾಯಕವನೀರ್ವರು | ನಡೆಸಿದೆವು ಎಂದೆನಲು ಕೋಪಿಸಿ ||೧||

ಮಾರವಿ ಏಕ

ಸೃಷ್ಟಿಯ ಸೊಬಗನು ದಿಟ್ಟಿಸಿ ಕೃತಿಯಲಿ | ಇಟ್ಟು ನಲಿವಿಯಲ್ಲ || ಭ್ರಷ್ಟನೆ ದೃಷ್ಟಿಯು ಹಿಂಗಲಿ
ಎನ್ನುತ | ಕೊಟ್ಟನು ಶಾಪವನು ||೧||

ಭಾಮಿನಿ

ಸುರಿವ ಕಂಬನಿಯಿಂದ ಅಲಕನ | ಕರಪಿಡಿದು ಕರೆತಂದು ಗೃಹದ | ಲ್ಲಿರಿಸಿ ನಂದಳು ಉಣಲು ತಾ
ತಂದಿತ್ತು ಸಂತೈಸಿ || ಮರುಗದಿರು ಎನ್ನಿಂದಲೀಪರಿ | ಕುರುಡುತನ ನಿನಗಾಯ್ತು ನಾ ನಿ | ನ್ನರಸಿಯಂದದಿ
ಸೇವಿಸುವೆನೆಂದೆನುತ ಪೇಳಿದಳು ||೧||

ಸಾಂಗತ್ಯ ರೂಪಕ

ಮುಂದೇನು ಗತಿಯೆಂದು ನಂದಳು ದುಃಖಿಸಿ | ಬಂದಳು ಬಹುಳೆ ಇದ್ದೆಡೆಗೆ || ಮಂದಗಮನೆ ಪ
ದ್ವಂದ್ವದ ಬಳಿಯಲ್ಲಿ | ನಿಂದಿರೆ ಮಾತನಾಡದೆಯೆ ||೧||

ಏಕಮ್ಮ ಕಣ್ಣೀರು ಏನಾಯ್ತು ಈಪರಿ | ಮೂಕಿಯಂದದಿ ನಿಂದಿ ಏಕೆ || ಶೋಕಕ್ಕೆ ಕಾರಣವೇನೆಂ
ಕೇಳಲು | ಆಕೆ ಅಭಿನಯಿಸಿ ತೋರಿದಳು ||೨||

ಘಂಟಾರವ ರೂಪಕ

ಮಾತೆ ಎನ್ನಯ | ಕರ್ಮಕಾಂಡವ | ಮಾತಿನಿಂದಲಿ | ತಿಳಿಸದಾದೆನು || ತಾತ ನೀದಿನ | ನಿ
ಕಾಣದೆ | ಭೀತಿ ತೋರಿಸಿ | ಕೇಳ್ದನೆನ್ನಲಿ ||೧||

ಇರುವ ಠಾವನು | ಹೇಳದಿರಲು ನಾ | ಕೆರಳಿ ಈ ಪರಿ | ಕೊಟ್ಟ ಶಾಪವ || ನೆರವಿಗೈದಿಹ | ಅಲಕನ
ಸಹ | ಕುರುಡನಾಗೆಂದು | ಶಪಿಸಿ ಬಿಟ್ಟನು ||೨||

ಕೇಳಿ ಬಹುಳೆಯು | ತಾಳಿ ದುಗುಡವ | ಪೇಳ್ದಳಾಕೆಗೆ | ಸಂತಯಿಸುತಲಿ || ತಾಳಿ ಧೈರ್ಯವ | ಹರಿ
ಸ್ತುತಿಸುವ | ಕೀಳು ದಿನದಲಿ | ಪಾರುಗೊಳಿಸುವ ||೩||

ಕೇದಾರಗೌಳ ಅಷ್ಟ

ಧಾರಿಣಿಪಾಲ ಉತ್ತಮ ತನ್ನ ಪುರದ ಸಂ | ಚಾರಕ್ಕೆ ಪೊರಟಿರಲು || ದಾರಿಯೊಳೀರ್ವರ ವಿಸ್ಮ
ಕರವಾದ | ಕಾರಿಯ ಕಂಡನೊಂದ ||೧||

ಮಂಡೆಯ ಕೆದರಿಸಿ ಏನೇನೊ ಬಯ್ಯುತ್ತ | ಗಂಡಗೆ ಬಡಿಯುವಳು || ಭಂಡನಂತಾಕೆಯ ಸಂತೈಸುವ
ಬೆಸ | ಗೊಂಡನು ಭೂಮೀಶನು ||೨||

ಏನಿದು ಹೊಸ ಪರಿ ಬಯ್ಯುತ್ತ ಬಡಿದರು | ನೀನೇಕೆ ಸುಮ್ಮನಿಹೆ || ಮಾನಿನಿಯರನು ಮರ್ಧಿಸದಿ
ನಿಜಕಪ | ಮಾನವಲ್ಲವೆ ಯೋಚಿಸು ||೩||

ಪತಿಯನ್ನು ಪರದೈವವೆಂದು ಪೂಜಿಸುವಾಕೆ | ಮತಿ ವಿಕಲತೆಗೊಂಡಿದೆ || ಅತಿಕೆಟ್ಟ ಗ್ರಹಚಾರ ಗಡ
ಮುಗಿದೊಡೆ ಮುಂದೆ | ಸತಿ ಮುನ್ನಿನಂತಹಳು ||೪||

ಶಂಕರಾಭರಣ ತ್ರಿವುಡೆ

ಅಗಲಿದಾ ಸತಿ ಸ್ಮೃತಿಯು ನೃಪತಿಗೆ | ತಗಲೆ ವಿರಹದಿ ನೊಂದನು || ಮಗುಳೆ ಮಡದಿಯ
ಪಡೆಯಲೋಸುಗ | ಲಗುಬಗೆಯೊಳೈದುತ್ತಲಿ || ಮುನಿಯೊಳೆಂದ ||೧||

ಎನ್ನ ನುಡಿ ಮೀರಿರ್ದ ಸತಿಯನು | ಮುನ್ನ ನಾನಗಲಿರ್ದೆನು || ಇನ್ನು ನಾನೇಕಾಂಗಿಯಾಗಿರೆ
ಚೆನ್ನವಾಗದು ಬಾಳಿದು || ಎಂದು ತಿಳಿದೆ ||೨||

ಸತಿಯು ಎಲ್ಲಿಹಳೆಂಬ ಪರಿಯನು | ವ್ರತಿಪ ಅರಿತೆನಗುಸುರ್ವುದು || ಮತಿಯ ತಿದ್ದಲು ದಾ
ತೋರ್ವದು | ಜತನದಲಿ ಕರೆತರುವೆನು || ಎನಲು ಮುನಿಪ ||೩||

ಬೇಗಡೆ ಅಷ್ಟ

ಲಾಲಿಪುದು ಭೂವರನೆ ಕಿವಿಗೊಟ್ಟು | ತವ ಮಡದಿಗೊದಗಿದ | ಗೋಳಿನಾ ಪರಿಭವವ ಮನವಿಟ್ಟು || ಸಾಲ ಪೋತಕನೆಂಬ ಫಣಿಪನು | ಬಾಲೆಯನು ಕೆಡಿಸಲ್ಕೆ ಒಯ್ದನು | ಮೇಲೆ ಆತನ ಕುವರಿ ನಂದಳು | ಶೀಲೆಗೆಡದಾ ಸ್ಥಳದೊಳಿಟ್ಟಳು ||೧||

ಧ್ರುವನು ಹಿಂದಕೆ ನಿನಗೆ ಪರಿಣಯವ | ಗಳಿಗೆಯನು ನೋಡದೆ | ತವಕದಲಿ ತಾಗೈದ ಆ ಸಮಯ || ರವಿಯು ಮಂಗಳ ಶನಿಯು ನಿನ್ನೆಡೆ | ಕವಿ ಬ್ರಹಸ್ಪತಿ ಮಡದಿ ಬಹುಳೆಗೆ | ಸವನಿಸಿಹರದರಿಂದ ಲಾಕೆಯು | ಧವಗೆ ತಾ ಪ್ರತಿಕೂಲೆಯಾದಳು ||೨||

ಮಿತ್ರವಿಂದೇಷ್ಟಿಯನು ಮಾಡಲ್ಕೆ | ನಿನ್ನಲ್ಲಿ ಬಹುಳೆಗೆ | ಮಿತ್ರ ಭಾವವು ಮೂಡುವುದು ನಿಜಕೆ || ದೈತ್ಯನಾದ ಬಲಾಕ ಸೈನಿಕ | ಮೊತ್ತದೊಂದಿಗೆ ಪೋಗಿ ನಿನ್ನಯ | ಪತ್ನಿಯನು ತರಬಲ್ಲನೆನ್ನಲು | ಉತ್ತಮನು ಪದಕೆರಗಿ ಪೊರಟನು ||೩||

ಭಾಮಿನಿ

ಮೇಧಿನಿಪನು ಸುಶರ್ಮನಿಂದಲಿ | ಸಾದರದಿ ಯಾಗವನು ನಡೆಸಿದ | ಮಾದಳಾದರೆ ಬಹುಳೆ ಮನ ಪಲ್ಲಟಿಸೆ ಪತಿಯಲ್ಲಿ || ಆದರವು ಮೂಡಿದುದು ತನ್ನಿಂ | ದಾದ ತಪ್ಪನ್ನೆಣಿಸಿ ಕೊರಗುತ | ಆ ಧರಾಧಿಪನನ್ನು ಸೇರಲು ತವಕಿಸುತ್ತಿಹಳು ||೧||

ಸೌರಾಷ್ಟ್ರ ತ್ರಿವುಡೆ

ಉತ್ತಮನು ಧ್ಯಾನಿಸಲು ತನ್ನಯ | ಮಿತ್ರನಾದ ಬಲಾಕ ದೈತ್ಯನು | ತತ್‌ಕ್ಷಣವೆ ನಡೆತಂದು ಪದಕೆರ | ಗುತ್ತ ನುಡಿದಾ ||೧||

ಧಾರಿಣಿಪ ಏಕೆನ್ನ ನೆನೆದಿಹೆ | ಕಾರಣವದೇನುಸುರ ಬೇಹುದು | ಮೂರು ಲೋಕದೊಳಿರಲಿ ತರುವೆನು | ಭೋರನಿಂದು ||೨||

ಉರಗಲೋಕದೊಳಿರುವ ಎನ್ನಯ | ತರುಣಿ ಬಹುಳೆಯ ತರುವ ಸಾಧ್ಯತೆ | ಇರುವುದೈ ನಿನಗೆಂದು ಕರೆಸಿದೆ | ಭರವಸೆಯಲಿ ||೩||

ಇದಕೆ ಭಯವೇಕಿನ್ನು ನಿಮ್ಮಯ | ಸುದತಿಯನು ತಂದೀವೆನೆನ್ನುತ | ಸದನಕೈದುತ ಸಚಿವನನು ತವ | ಕದಲಿ ಕರೆಸೆ ||೪||

ಏನು ಕಾರಣ ಎನ್ನ ಕರೆಸಿದಿ | ರೇನು ಎನ್ನಿಂದಾಗ ಬೇಕಿದೆ | ಕಾರಿಯವದೇನೆನೆ ಬಲಾಕನು | ತಾನು ನುಡಿದಾ ||೫||

ಪಂತುವರಾಳಿ ಅಷ್ಟ

ಕೇಳಯ್ಯ | ಮಾತ | ಕೇಳಯ್ಯ ||ಪ||

ಉತ್ತಮನರ್ಧಾಂಗಿ ಬಹುಳೆ ಎಂಬವಳ | ಪೊತ್ತೊಯ್ದ ಸಾಲಪೋತಕನೆನ್ನುವ ಖಳ || ಮತ್ತಕಾಸಿನಿ ಇಹ ಠಾವನ್ನು ತಿಳಿದು | ಇತ್ತನೀ ತ್ವರಿತದಿ ಆಕೆಯ ತಹುದು ||೧||

ಅಷ್ಟ ಸಿದ್ಧಿಗಳನ್ನು ತಿಳಿದಿಹೆ ನಾನು | ಕಷ್ಟವೆ ಈ ಕಾರ್ಯ ಕೊಡು ಅಪ್ಪಣೆಯನು || ದುಷ್ಟನ ಮಡುಹಿ ಭಾಮಿನಿಯನ್ನು ತಹೆನು | ಸೃಷ್ಟೀಶ ನಿಶ್ಚಿಂತನಾಗಲಿ ಬಹೆನು ||೨||

ಭಾಮಿನಿ ಅರ್ಧ

ಉತ್ತಮನ ಕುರುಹಿಗೆ ಬಲಾಕನು| ಇತ್ತನಾತನ ಮುದ್ರೆಯುಂಗುರ| ದೈತ್ಯನದ ತಾ ಕೊಂಡು ಪೊರ
ನಾಗಲೋಕದೆಡೆ ॥

ಆರ್ಯಸವಾಯಿ ಏಕ

ಬಹುಳೆಯ ಕಾಣಲು ದುರ್ಮುಖಿ ಪೊರಟನು । ಬಹಳ ತ್ವರಿತದಿ ರಸಾತಳಕೆ ॥ ಬಹು
ಹುಡುಕಾಡಿದರೆಲ್ಲಿಯು ಅವ | ಳಿಹ ಠಾವರಿಯದೆ ಮನ್ಮನಕೆ ॥೧॥

ನಂದಳ ಕಾಣುತ ಕೈಮುಗಿದಿತ್ತನು| ತಂದಿಹ ಮುದ್ರಿಕೆಯನು ಕರಕೆ॥ ಹೊಂದುತ ತೋಷವ ಅಸು
ತಾ ಕರೆ | ತಂದಳು ಬಹುಳೆಯ ಮಂದಿರಕೆ ॥೨॥

ಕಂದ

ಉಂಗುರ ಕಾಣುತ ಹೊಂದಿದ | ಭಂಗವ ಮರೆತಳು ಬಹುಳೆಯು ನೆನೆಯುತ ಪತಿಯಂ ॥ ಅಂ
ತನ್ನಯ ರಮಣನ | ಸಂಗತಿಯನು ತಾ ಬೆಸಸಿದಳಸುರನೊಳಾಗಲ್ ॥೧॥

ಆರಭಿ ಆದಿ

ಕರೆತರಲೆನುತ ತಾನೆ | ಎನ್ನಯಕಾಂತ | ತ್ವರಿತದಿಂದಟ್ಟಿದನೆ ॥ ಭರವಸೆ ಉಳ್ಳವಳಾದರು ನಿನಗ
ಅರಸನ ಗೆಳೆತನ ದೊರಕಿದ ಪರಿಯೆಂತು ॥೧॥

ಧರ್ಮವಂತ ಬಲಾಕನು | ಸುಶರ್ಮನ | ಕರ್ಮಕ್ಕೆ ಕುದಿಗೊಂಡನು ॥ ಮರ್ಮವರಿತು ಸತಿಯ
ತಂದ ವ್ಯಾಜ್ಯದಿ | ನಿಮ್ಮರಸನ ಸಖ್ಯ ದೊರೆತೆನ್ನ ಕಳುಹಿದ ॥೨॥

ನಂದಾ ನಾ ಪೋಗಲೇನು| ಎನ್ನರಸನ| ಇಂದೇ ನಾ ಕಾಣಲೇನು ॥ ನೊಂದು ಕೊಳ್ಳದೆ ಎನ್ನ ಕಳು
ಕೊಡುತಾಯೆ | ಮುಂದೆ ನಿಮ್ಮೀರ್ವರ ಬಗೆಗೆ ನಾ ಶ್ರಮಿಸುವೆ ॥೩॥

ಆನಂದ ಭಾಷ್ಪದಿಂದ | ಬಹುಳೆಯನಪ್ಪಿ | ಆನನ ನೋಡಿ ನಂದ ॥ ಮಾನವಾಧಿಪನನ್ನು ಸೇರಿ
ಸುಖಿಸೆಂದು | ದಾನವನೊಂದಿಗೆ ಬೀಳ್ಕೊಂಡಳಾಕೆಯ ॥೪॥

ಭಾಮಿನಿ ಅರ್ಧ

ಆ ಲಲನೆಯನ್ನೊಯ್ದ ವಾರ್ತೆಯ| ಸಾಲಪೋತಕಗುಸುರೆ ಚಾರರು| ಕೇಳಿ ಕಿಡಿಕಿಡಿಯಾಗಿ ತಾನಿದಿರಾ
ಕಿಂತೆಂದಾ ॥

ಮಾರವಿ ಏಕ

ಎಲ್ಲಿಗೆ ಸತಿಯನ್ನೊಯ್ಯುವೆ ದಾನವ । ನಿಲ್ಲುಮುಂದರಿಯದಿರು ॥ ಫುಲ್ಲನಯನೆಯ
ಒಪ್ಪಿಸದುಳಿದರೆ | ಕೊಲ್ಲುವೆ ನಿನ್ನನ್ನು ॥೧॥

ಕೊಲ್ಲುವ ಬಲ ನಿನಗೆಲ್ಲಿದೆ ಗೈದಿಹ | ಖಿಲ್ಲತನವ ಬಲ್ಲೆ ॥ ಸಲ್ಲಳು ಪರವಧು ಗಳಿಸಿದ ಸತ್ಕ
ಳೆಲ್ಲವು ವ್ಯರ್ಥವಲಾ ॥೨॥

ಹೆಣಗಳ ಮೆಲ್ಲುವ ಅಸುರನೆ ಒಯ್ಯುವ । ವನಿತೆಯು ನಿನ್ನವಳೆ ॥ ಬಣಗು ರಕ್ಕಸನೆ ಆಕೆ
ಒಪ್ಪಿಸಿ | ಗೋಣಗುಟ್ಟದೆ ಪೋಗು ॥೩॥

ಒಪ್ಪಿಸುವೆನು ನಿನ್ನಸುವನು ಕಾಲಗೆ । ತಪ್ಪದು ಎನುತವನ ॥ ದೊಪ್ಪನೆ ಕೆಡೆದನು ಮೂರ್ಛೆ
ಸಮರದಿ | ಮುಪ್ಪುರಿಗೊಳ್ಳುತಲಿ ॥೪॥

ಭಾಮಿನಿ ಅರ್ಧ

ಉತ್ತಮನ ಬಳಿಗಸುರನಾತನ | ಪತ್ನಿಯನು ಕರೆತರಲು ಸಂತಸ | ವೆತ್ತು ಪಾದದಿ ಬಿದ್ದು ನುಡಿದಳು
ಪಡುತ ಪರಿತಾಪ ॥

ಕಾಂಭೋದಿ ತ್ರಿವುಡೆ

ಕ್ಷಮಿಸೆನ್ನ ಕರುಣೆದೋರಿ | ಮತಿ ಮರೆತು ನಾ | ಕ್ರಮ ತಪ್ಪಿ ನಡೆದ ನಾರಿ ॥ ರಮಣನಭಿಮತವರಿತು
ನಡೆಯದೆ | ಅಮಿತ ಕಾರ್ಪಣ್ಯವನು ಹೊಂದಿದೆ | ನಿಮಗೆ ಎನ್ನಲಿ ಕೋಪವಿರದಿರೆ | ರಮಣಿ ಬಾ
ಎಂದೊಪ್ಪಿಕೊಳ್ಳದು ॥೧॥

ದೋಷಿ ನೀನಲ್ಲವಲೆ | ಗ್ರಹಗತಿಯಿಂದ | ಮೋಸವಾಯಿತು ಕೇಳ್ಬಾಲೆ ॥ ಶ್ರೀಶನಾ ದಯೆಯಿಂದ
ಮನಸಿನ | ಕ್ಲೇಶವೆಲ್ಲವು ನಾಶವಾದುದು | ಆ ಶಶೀ ರೋಹಿಣಿಯರಂದದಿ | ತೋಷದಿಂದಲಿ
ಇರುವ ಮುಂದಕೆ ॥೨॥

ಎನದೊಂದು ಬಯಕೆಯನ್ನು । ಈಡೇರಿಪ । ಮನಮಾಡಬೇಕು ಇನ್ನು ॥ ಜನಕನಿಗೆ ಇದಿರಾಗಿ
ನಂದಳು । ಎನಗೆ ರಕ್ಷಣೆಯಿತ್ತ ಕಾರಣ । ಫಣಿಪ ಈರ್ವರಿಗಿತ್ತ ಶಾಪವ । ಜನಪ ನೀ
ಪರಿಹರಿಸಬೇಕಿದೆ ॥೩॥

ಭಾಮಿನಿ ಅರ್ಧ

ಪೊಡವಿಪಾಲ ಸಶರ್ಮನೊಂದಿಗೆ | ಪಡೆದ ಶಾಪವ ಕಳೆವ ಮಾರ್ಗವ | ಒಡನೆ ತೋರುವುದೆನಲು
ಯೋಚಿಸಿ ನುಡಿದನಿಂತೆನುತ ॥

ಕಾಪಿ ಅಷ್ಟ

ದೊರೆರಾಯ ಕೇಳೆನ್ನ ಮಾತ | ಇಂಥ | ಪರಿಭವ ಒದಗಿತೆ ಬಲು ವಿಪರೀತ ॥ ದೊರಕಿದ ಶಾಪವ
ಕಳೆಯೆ | ಇದೆ | ಸರಿಯಾದ ಯಾಗ ಸಾರಸ್ವತ ತಿಳಿಯೆ ॥೧॥

ಗಾನ ವರ್ತನ ಸೇವೆಯಿಂದ । ದೇವಿ । ತಾನೆ ಮೈದೋರಿ ಕಳೆವಳು ಶಾಪದಂದ ॥ ನೀನವರನು
ಕರೆತರಿಸು | ಯಾಗ | ನಾನೆ ಮಾಡಿಸುವೆ ನಂಬುಗೆಯ ನೀನಿರಿಸು ॥೨॥

ಭಾಮಿನಿ

ಬಳಿಕ ಬಹುಳೆಯು ಪತ್ರವೊಂದನು । ಕಳುಹಿದಳು ದುರ್ಮುಖಿನ ಮೂಲಕ । ನಳಿನ ಲೋಚನೆ
ನಂದಳದ ಓದುತ್ತ ಸಂತಸದಿ ॥ ಅಲಕನನ್ನೊಡಗೊಂಡು ಅಸುರನ | ಬಳಸಿನಲಿ ಕುಶದ್ವೀಪಕೈತರೆ |
ತಿಳಿದು ಬಹುಳೆಯು ಬಹುವಿಧದಿ ಸತ್ಕರಿಸೆ ಈರ್ವರನು ॥೧॥

ಕೇದಾರಗೌಳ ಅಷ್ಟ

ವಿಧಿ ವಿಧಾನದಿ ಸಾರಸ್ವತ ಯಾಗ ನಡೆಸಲು | ಒದಗಿಸೆ ಪರಿಕರವ ॥ ಹದನವರಿತು ಯಾಗವನು
ಸುಶರ್ಮನು ತಾನೆ | ಪದುಳದಿ ನಡೆಸಿದನು ॥೧॥

ಗಾನದಿ ಭಾರತಿಯನ್ನು ಕೀರ್ತಿಸುತಲಿ । ತಾನೆ ಅಲಕ ಹಾಡಲು ॥ ಗಾನಕ್ಕೆ ತಕ್ಕಂತೆ ನಂದಾ
ನರ್ತಿಸುತಿರೆ | ವಾಣಿ ಮೈದೋರಿದಳು ॥೨॥

ನವರೋಜು ಏಕ

ಲಾಲಿಪುದು ಭಕ್ತರಿರ | ಮುದ | ತಾಳಿರುವೆ ನಾನಿವರ ‖ ಪಾಲಿಸಲೆನ್ನುತ ಬಂದಿಹೆ ಬಯಕೆ

ಕೇಳುವುದೆಂದೆನೆ | ಅಲಕನಿಂತೆಂದನು ‖೧‖

ನಂದಳ ಮೂಗತ್ವವನು | ಸಾ | ನಂದದಲಿ ಕಳೆದದನು ‖ ಅಂಧತ್ವವ ಕಳೆದೆನ್ನನುದ್ಧರಿಪುದ

ಎಂದೆನೆ ಶಾರದೆ ಅಸ್ತೆನುತಡಗಲು ‖೨‖

ಸಾಂಗತ್ಯ ರೂಪಕ

ದೇವಿಯ ವರದಿಂದ ಶಾಪವು ತೊಲಗಲು | ಭುವರೇಣ್ಯನಿಗು ಬಹುಳೆಗೂ ‖ ತಾವಭಿವಂದಿಸುತ

ಶ್ರಮಕೆ ಮುಂದೆ | ಭಾವಕಿ ನಂದಾ ಪೇಳಿದಳು ‖೧‖

ಎನಗೆ ಮೂಗತ್ವವ ಅಲಕಗೆ ಅಂಧತ್ವ | ವನು ತೊಲಗಿಸುತ ಕಾಯ್ದಿಹಿರಿ ‖ ತನಯ ಮನ್ವಂತರಾಧಿ

ದಿಸಲಿ ಎಂದು | ಮನದುಂಬಿ ಹರಸಿದಳವಳ ‖೨‖

ನವ ದಂಪತಿಗಳ ಮಂಟಪದಿ ಕುಳ್ಳಿರಿಸುತ್ತ | ಯುವತಿಯರೆಲ್ಲರೊಂದಾಗಿ ‖ ನವರತ್ನದಾ

ಬೆಳಗಿದರೊಂದಾಗಿ | ಲವಲವಿಕೆಯ ಪರಿಸರದಿ ‖೩‖

ಉತ್ತಮ ನೃಪತಿಗೆ ನಂದೆಯ ವರದಂತೆ | ಉತ್ತಮ ನಕ್ಷತ್ರದಲ್ಲಿ ‖ ಔತ್ತಮನುದಿಸಿ ಮನ್ವಾಧಿಪನೆ

ಲೋ | ಕೋತ್ತರ ಕೀರ್ತಿಗಳಿಸಿದನು ‖೪‖

ಮಂಗಲ (ಸೌರಾಷ್ಟ್ರ ಆದಿ)

ಇಬ್ಬರಣುಗನಾಗಿ ಬೆಳೆದವಗೆ | ಕೊಬ್ಬಿದಸುರರನ್ನು ತರಿದವಗೆ ‖ ಮಬ್ಬನ್ನು ತೊಲಗಿಸಿ ನಂಬ

ಭಕುತರ | ತಬ್ಬಿಕಾಯುವ ಶ್ರೀನರಹರಿಗೆ ‖ ಮಂಗಲಂ ಜಯ ಮಂಗಲಂ ‖೧‖